Koravanji

# ಕೊರವಂಜಿ



ಸಂಪಾದಕರು :

ಶ್ರೀ॥ ರಾ. ಶಿ.

ಬರಹಗಾರರು :

ಶ್ರೀ॥ ತುತೂರಿ

ಶ್ರೀ॥ ಕುಶೀರದವ

ಶ್ರೀ॥ ಕುಮಾರ್

ಶ್ರೀ॥ ಹೊಸೂರ್‌ಕರ್

ಶ್ರೀ॥ ಶಿವಣ್ಣ

ಶ್ರೀ॥ ಕಾಮತ್

ಶ್ರೀ॥ ದಾಶರಥಿ ದೀಕ್ಷಿತ್

ಶ್ರೀ॥ ಗೋವಿಂದು

ಶ್ರೀ॥ ಗಂಗಾಧರ

ಶ್ರೀಮತಿ ಕೇಸರಿ

ಶ್ರೀ॥ ಪೆದ್ದಭಟ್ಟ

ಶ್ರೀ॥ ಸಾಮಿ

ಇತ್ಯಾದಿ, ಇತ್ಯಾದಿ.


ತಿಳಿನಗೆಯ ಮಾಸಪತ್ರಿಕೆ


FAS-467
Silky Soft
and luxuriant
HAIR !
RAJA
(TRADE MARK)
HAIR OIL
RAJA HAIR OIL
MANYAM & CO. Bangalore, Madras, Madura, Bombay

# ಪ್ಯೂರಿಟೀ ಬಾರ್ಲೀ
## ಎಂಟರಷ್ಟು ಉತ್ತಮವಾದುದು




ಪ್ಯೂರಿಟೀ ಬಾರ್ಲಿಯಲ್ಲಿ ಪರ್ಲ್ ಬಾರ್ಲಿಯ ಉತ್ತಮ ಗುಣಗಳೆಲ್ಲಾ ಕೇಂದ್ರೀಕೃತ ರೂಪದಲ್ಲಿ ಅಡಗಿವೆ. ಒಂದು ಚಂಚಾದಷ್ಟು ಪ್ಯೂರಿಟೀ ಎಂಟು ಚಂಚಾ ಪರ್ಲ್‌ಗೆ ಸಮಾನವಾದುದು. ನೀವು ಕೊಂಡಾಗಲೆಲ್ಲಾ ಅದು ಹೊಸದಾಗಿಯೇ ಇರುತ್ತದೆ. ಏಕೆಂದರೆ, ಅದು ಆರೋಗ್ಯಕರವಾದ ರೀತಿಯಲ್ಲಿ ಸೀಲುಮಾಡಿದ ಡಬ್ಬಿಗಳಲ್ಲೇ ನಿಮ್ಮ ಕೈಸೇರುವುದು. ಆದರಿಂದ ಇಪ್ಪತ್ತೇ ನಿಮಿಷಗಳಲ್ಲಿ ರುಚಿಕರವಾದ ಗಂಜಿಯನ್ನು ತಯಾರಿಸಬಹುದು. ತಲೆ ಸವರಿದ ಎರಡು ಚಂಚಾಗಳಷ್ಟು ಪ್ಯೂರಿಟೀ ಬಾರ್ಲಿಯನ್ನು ನೀರು ಹಾಕಿ ಅಂಟಂಟಾಗಿರುವಂತೆ ಕಲಸಿ, ಒಂದು ಪೈಂಟಿನಷ್ಟು ನೀರು ಬೆರಸಿ ಐದೇ ನಿಮಿಷಗಳು ಕುದಿಸುವುದು. ಅನಂತರ ನಿಮ್ಮ ರುಚಿಗೆ ತಕ್ಕಂತೆ ಉಪ್ಪು, ಸಕ್ಕರೆ ಅಥವಾ ನಿಂಬೆಯ ರಸವನ್ನು ಬೆರೆಸುವುದು.




ಅಟ್ಲಾಂಟಿಸ್ (ಈಸ್ಟ್) ಲಿಮಿಟೆಡ್, ಪೋ. ಬಾ. ನಂ. 664, ಕಲಕತ್ತ

4PBX-5 KN

ಮನೆಗೆ ಕಾಂತಿ ! ಮನಕ್ಕೆ ಶಾಂತಿ !! ದೇಹಕ್ಕೆ ವಿಶ್ರಾಂತಿ !!!




ಕಣ್ಣುಗಳಿಗೆ ತಂಪು ಬೀರುವುದು,
ದೇದೀಪ್ಯಮಾನ

# ಮೈಸೂರು ಬಲ್ಬು

ಇದು ಭಾರತದ್ದು! ಸುಲಭ ಬೆಲೆಯದು!
ಹೆಚ್ಚು ಬಾಳಿಕೆ ಬರುವುದು !!
ಎಲ್ಲೆಲ್ಲೂ ದೊರೆಯುತ್ತೆ.

ಫೋನ್: 2026 | ಗ್ರಾಮ್ಸ್: 'Mysorlamp,

ಮೈಸೂರು ಲ್ಯಾಂಪ್ ವರ್ಕ್ಸ್ ಲಿ., ಮಲ್ಲೇಶ್ವರಂ, ಬೆಂಗಳೂರು-3



ANNOUNCING

EARLY

RELEASE

★

*Jagat Pictures*

# SHĀIR

WITH



THREE

GREAT STARS

**Suraiya**

**Kamini Kaushal**

**&**


**Dev Anand**

★

*For Entire South:*

**Hind Republic Pictures,**

**185, Gandhi Nagar : : : Bangalore 2**



ಸಂಪುಟ ೯ | ಡಿಸೆಂಬರ್ ೧೯೪೯ | ಸಂಚಿಕೆ ೯

## ಕುಹಕಿಡಿಗಳು

—-o—

"ಪೂರ್ವಕಾಲದಲ್ಲಿ ಮಂತ್ರವಾದಿಗಳು ಏನನ್ನಾದರೂ ಅದೃಶ್ಯಮಾಡಿಸುತ್ತಿದ್ದರು" ಸುದ್ದಿ.

—ಏನು ಮಹಾ! ಈಗಲೂ ಮಂತ್ರಿಗಳು ಒಂದು ಹತೋಟಿ ಆಜ್ಞೆ ತಂದರೆ ಇದ್ದ ಸಾಮಾನೆಲ್ಲಾ ಅದೃಶ್ಯವಾಗುಲ್ಲವೇ!

* * *

ಮೊನ್ನಿನ ರಾಜಧಾನಿಯ ಚುನಾವಣೆಗಳಲ್ಲಿ, "ನೇತಾಜಿಯವರು ಬದುಕಿದ್ದಾರೆ. ಇಷ್ಟರಲ್ಲೇ ಹಿಂತಿರುಗಿ ನಮ್ಮ ನಾಯಕತ್ವವನ್ನು ವಹಿಸಿಕೊಳ್ಳುತ್ತಾರೆ, ನಮಗೇ ಓಟು ಕೊಡಿ" ಎಂದು ಯಾರೂ ಪ್ರಚಾರ ಮಾಡಲಿಲ್ಲವಂತೆ.

* * *

"ಕಡಲೇಕಾಯಿ ಮೈಗೆ ಒಳ್ಳೆಯದು" ಎಂದು ಹಿರಿಯರು ಹೇಳುತ್ತಾರೆ.

—ಆದರೆ ಇಂಗ್ಲೆಂಡಿನ ಸಚಿವ ಸ್ಟ್ರಾಚಿಯವರು ಈಗ ಖಂಡಿತ ಅದನ್ನೊಪ್ಪುಲ್ಲವಂತೆ

* * *

ಡಿಸೆಂಬರ್ ಹದಿನಾರರ ನಂತರ ನಮ್ಮೂರ ಕಾನ್‌ಸೆಂಬ್ಲಿಯು ಸಹಜವಾಗಿ ಕೆಲಸ ಮಾಡಲಾರಂಭಿಸುತ್ತದೆ.

*　　　　*　　　　*

ಡಾ|| ರಾಧಾಕೃಷ್ಣ ಅವರು ರಷ್ಯನರಿಗೆ ವೇದಾಂತ ಹೇಳುತ್ತಿರುವರಂತೆ.

—ರಷ್ಯನರು ಅವರಿಗೆ ದೇವಾಂತ್ಯ ಬೋಧಿಸುತ್ತಿರುವುದು ಸುಳ್ಳಂತೆ.

*　　　　*　　　　*

ಬೆಂಗಳೂರು ಪೌರಸಭಾ ಕಾರ್ಪೊರೇಷನ್‌ಗೆ ಡಿಸೆಂಬರ್ ೮ ರಿಂದ "ಮೆಯ್ಯೋರ್" ಬರ್ತಾರೆ ಅಂತ ಮಂಗಳೂರಿನವ ಹೇಳುತ್ತಿದ್ದ.

*　　　　*　　　　*

ಆತ್ಮ ಹತ್ಯೆಯನ್ನು ಅಪರಾಧವೆಂದು ಪರಿಗಣಿಸಬಾರದು ಎಂದು ಶ್ರೀ ಕಾಮತ್ ಅವರು ಠರಾವು ಸೂಚಿಸಿದರಂತೆ.

—ಇದು ಕೇವಲ ಸ್ವಾರ್ಥಕ್ಕಾಗಿ ಅನ್ನುವುದು ಕುಹಕ.

*　　　　*　　　　*

ರಷ್ಯಾದವರು ಮೂರು ಹೊಸ ಗ್ರಹಗಳನ್ನು ಕಂಡುಹಿಡಿದಿರುವರಂತೆ.

—ನಾವಾಗಲೇ ದಶಮಗ್ರಹವನ್ನು ಕಂಡುಹಿಡಿದಿದ್ದೇವಲ್ಲ!

*　　　　*　　　　*

ಸಾವಿರ ಹಳ್ಳಿಗಳಲ್ಲಿ ಮಹಾತ್ಮರ ಹೆಸರಿನಲ್ಲಿ ಒಂದೊಂದು ಸಾರ್ವಜನಿಕ ನಿವಾಸವನ್ನು ಕಟ್ಟಿಸುತ್ತಾರಂತೆ.

—ಆ ನಿವಾಸಗಳಲ್ಲಿ ಏಕಾದಶೀ ದಿವಸವೇ ಸಭೆ ಸೇರಿಸಬೇಕೆಂದು ನಿಯಮ ವೇನೂ ಇಲ್ಲವಂತೆ.

*　　　　*　　　　*

ಆಂಧ್ರ ಪ್ರಾಂತ್ಯ ನಿರ್ಮಾಣ ಆದಾಗ—ಪಾಕಿಸ್ಥಾನ್ ಆದಾಗ ಆದ ಹಾಗೇ—ಜನರು ಇಲ್ಲಿಂದಲ್ಲಿಗೆ, ಅಲ್ಲಿಂದಿಲ್ಲಿಗೆ ವಲಸೆ ಹೋಗುತ್ತಾರೆಯೋ? ಎಂದು ಚಿರಂಜೀವಿಯೊಬ್ಬನು ಪ್ರಶ್ನೆ ಕೇಳಿದ್ದಾನೆ.

*　　　　*　　　　*

ಬೆಳಿಗ್ಗೆ ಹಾಲಿನವಳು ಬರದೇ ಇದ್ದರೂ, ಹಾಲಕ್ಕಿ ಹಿಡಿದುಕೊಂಡು ಬರುವವನು ತಪ್ಪುವುದಿಲ್ಲ ಎಂದು ಒಬ್ಬರು ಗೋಳಿಟ್ಟಿದಾರೆ.

*　　　　*　　　　*

ಹುಲಿಕೊಬ್ಬು ಕೀಲು ನೋವುಗಳಿಗೆ ಒಳ್ಳೆಯದೆಂದು ಹೇಳುತ್ತಾರೆ.

—ಹುಲಿಗಳಿಗೆ ಕೀಲುನೋವು ಬಂದರೆ ಅವಕ್ಕೆ ಮನುಷ್ಯರ ಕೊಬ್ಬು ಒಳ್ಳೆಯದಿರಬಹುದೇ?

*　　　　*　　　　*

# ಉರಿಗಾಳು

ಸರ್ಕಾರಿ ಅಧಿಕಾರಿಗಳು ತಮ್ಮ ತಮ್ಮಲ್ಲೇ ಓಟದ ಪಂದ್ಯಗಳನ್ನು ಏರ್ಪಡಿಸಿ. ಬಾಜಿ ಕಟ್ಟಬಹುದೆಂದೂ, ಈಚೆಗೆ ಹೊರಬಂದ ಆಜ್ಞೆ ಅದಕ್ಕೆ ಅವಕಾಶ ಕೊಡುವುವೆಂದೂ ಅಧಿಕಾರವಲಯದಲ್ಲಿ ಹೇಳಲಾಗಿದೆ

* * *

ಗಾಂಧೀ ಸ್ಮಾರಕನಿಧಿ ವಸೂಲಿಗಾಗಿ ೧೦೦೦ ರಶೀತಿ ಪುಸ್ತಕಗಳನ್ನು ಪಡೆದ "ಸ್ನೇಹಿತರು" ಇಷ್ಟರಲ್ಲೇ ಲೆಕ್ಕ ಒಪ್ಪಿಸದೆ ಹೋದರೆ, ತಾವು ಉಪವಾಸ ಮಾಡುವುದಾಗಿ ಮೈಸೂರು ಕಾಂಗ್ರೆಸ್ ಅಧ್ಯಕ್ಷರು ಇತ್ತ ಹೇಳಿಕೆಯ ವಿಷಯ ಕುರಿತು ಪ್ರಶ್ನಿಸಲಾಗಿ, ಅವುಗಳನ್ನು ಪಡೆದ ಮಹನೀಯರು, ತಾವೂ ಹಿಂದೆ ಉಪವಾಸದಿಂದ ನರಳಿರುವುದಾಗಿ ಹೇಳಿಕೆ ಇತ್ತಿದಾರೆ

* * *

"ಪಂಡಿತ ರಾಮಕುಮಾರ ಚೌಬೆಯವರಿಗೆ ೧೪ ಡಿಗ್ರಿ ಇತ್ತು. ಮೊನ್ನೆ ಅವರಿಗೆ ಮತ್ತೊಂದು ಡಿಗ್ರಿ ಏರಿತು".. ಅವರನ್ನು ಈ ಜ್ವರ ಎಂದಿಗೆ ಬಿಡುತ್ತದೋ ನೋಡಬೇಕು.

* * *

"ವಾರಕ್ಕೊಂದೂಟ ಬಿಡಿ" ಎಂಬ ಚಳುವಳಿಯಿಂದ, ಒಪ್ಪತ್ತಾದರೂ ಹೆಣ್ಣು ಮಕ್ಕಳು ಅಡಿಗೆ ಮನೆಯಿಂದ ಹೊರಬಂದು, ತಿರುಗಾಡಲು ಅವಕಾಶವಾಗುತ್ತದೆ"........(ಡಿಲ್ಲಿ ಬಾತ್ಮಿ) ಈ ಬಾತ್ಮಿದಾರನಿಗೆ ಇನ್ನೂ ಮದುವೆಯಾಗಿಲ್ಲವೆಂಬುದು ಸ್ಪಷ್ಟ.

* * *

"ಗುರುಮುಖಿ ಶಿಕ್ಷಣವನ್ನು ವಿರೋಧಿಸಲು ಪ್ರಾಂತದಾದ್ಯಂತ ಚಳುವಳಿ ಹೂಡಬೇಕು" (ಅಮೃತಸರ ವರದಿ) ...... ಮತ್ತೆ ಯಾರ ಮುಖೇನ ಆಗಬೇಕಂತೆ?

* * *

"ಎಂಥ ಮರಳುಗಾಡನ್ನೂ ಒಂಟೆಗಳ ಸಹಾಯದಿಂದ ಸುಲಭವಾಗಿ ದಾಟಬಹುದು" (ಪಠ್ಯಪುಸ್ತಕ) ಹಾಗಾದರೆ, ನಾವೂ ಕೆಲವನ್ನು ತರಿಸಿ ನೋಡಬೇಕು.

* * *

"ನಮ್ಮ ಅತಿ ಮುಖ್ಯ ಗೃಹಕೈಗಾರಿಕೆ......."ಭಾಷಣ" (ಆಕಾಶವಾಣಿ)

*　　*　　*

"ಪರ್ಷಿಯಾದ ಷಾ, ತಮ್ಮನ್ನು ಅಮೇರಿಕದವರು ಕೇಳಿದ ಪ್ರಶ್ನೆಗಳಿಗೆಲ್ಲ, ನೀರು ಕುಡಿದಂತೆ ಉತ್ತರ ಹೇಳುತ್ತಿದಾರೆ" (ವರದಿ) .......ಹಾಗಾದರೆ, ಆ ಜನಕ್ಕೆ ಅದು ಸಪ್ಪೆಯಾಗಿ ಕಾಣುತ್ತದಲ್ಲಾ ?

*　　*　　*

"ವ್ಯವಸಾಯಕ್ಕೆ ಸಹಾಯವಾಗುವ ಮಣ್ಣು ಪತ್ತೆ" (ಶಿರೋನಾಮೆ ತಾಯಿ ನಾಡು ಸುದ್ದಿ ೧೮-೧೧-೪೯)........ಹೆಚ್ಚು ಆಹಾರ ಬೆಳೆಯಿರಿ, ಎಂಬ ಚಳುವಳಿಗೆ ಖರ್ಚಾದ ಹಣ ಸಾರ್ಥಕ

*　　*　　*

ಮೈಸೂರು ಸಂಸ್ಥಾನದಿಂದ ಮೆಣಸಿನಕಾಯಿಯನ್ನು ರಫ್ತು ಮಾಡಕೂಡ ದೆಂದು ಸರ್ಕಾರದ ಆಜ್ಞೆಯಾಗಿದೆ. ಏಕೀಕರಣ ಚಳುವಳಿಗೂ ಇದಕ್ಕೂ ಏನಾ ದರೂ ಸಂಬಂಧವಿದೆಯೆ, ಎಂದು ಹಲವರು ಶಂಕಿಸುತ್ತಿದಾರೆ.

*　　*　　*

"ಮಹಿಳೆಗೆ ವಿದ್ಯೆ ಕಲಿಸಿದರೆ, ಸಂಸಾರಕ್ಕೇ ವಿದ್ಯೆ ಕಲಿಸಿದಂತೆ" (ಯುನೆಸ್ಕೊ ಸೆಮಿನಾರ್ ವರದಿ) ಹಿರಿಯಕ್ಕನ ಚಾಳಿ ಮನೆಗೆಲ್ಲ !

*　　*　　*

"ಪುರುಷನಿಗೆ ವಿದ್ಯೆ ಕಲಿಸಿದರೆ, ಅವನೊಬ್ಬನಿಗೆ ಮಾತ್ರ ಉಪಯೋಗ" (ಡಿಟ್ಟೋ) ಬರುವ ಸಂಬಳ ಅವನೊಬ್ಬನಿಗೂ ಸಾಲದು.

*　　*　　*

ಚೀನೀ ಜನರಲ್ಲುಗಳ ಸಾಹಸ! ಹಿಮಾಲಯವನ್ನು ದಾಟಿ, ಪಾಕಿಸ್ಥಾನಕ್ಕೆ ಬಂದಿದಾರೆ" (ಶಿರೋನಾಮೆ) ಏಕೆ ? ಪಾಕಿಸ್ಥಾನದಲ್ಲಿ ಚೀನೀ ಶತ್ರುಗಳಿದಾರೆಯೆ ?

*　　*　　*

ನನ್ನ ಕವನಗಳನ್ನು ಮೂಢರನೇಕರು ಹಳಿಯುತ್ತಿದಾರೆ, ಎಂದು ಒಬ್ಬ ಪ್ರಗತಿ ಕವಿ ಗೊಣಗುತ್ತಿದಾನೆ. ಸದ್ಯಃ ಅದನ್ನು ಹೊಗಳುವ ಮೂಢರೂ ಕೆಲವರಿದಾರಲ್ಲಾ !

*　　*　　*

ಮೈಸೂರು ನಗರದ ಮುನಿಸಿಪಲ್ ಚುನಾವಣೆಯಲ್ಲಿ ಎಲ್ಲ ಪಕ್ಷ ಪ್ರತಿಪಕ್ಷ ಗಳ ಜನರೂ "ಗಾಂಧಿಕಿ ಜೈ" ಎಂದು ಕೂಗುತ್ತಿರುವುದು ಆಶ್ಚರ್ಯಕರವಾಗಿದೆ" (ವರದಿ) ರಾಷ್ಟ್ರಪಿತನನ್ನು ಮರೆಯುವ ಹಕ್ಕು ಎಲ್ಲರಿಗೂ ಇದೆ.

*　　*　　*

# ಕೊರವನ ಸಿಂಹಾವಲೋಕನ

"ಅದ್ಭೂರಿ! ಮಹಾ ಅದ್ಭೂರಿ! ಅಂತ ನೀವೆಲ್ಲಾ ಜಂಭ ಕೊಚ್ಚುಕೋತಾ ಇದ್ದಿರಲ್ಲ! ಈಗ ನೋಡಿ! ನಾನು ಹೇಳಲಿಲ್ಲವೇ ಆಗಲೆ!" ಅಂದ ಕೊರವ ಬರುತ್ತಾ ಇರುವಾಗಲೇ, ಬಾಗಲ ಹತ್ತಿರಾನೇ.

"ಏನಯ್ಯಾ! ನೀನು ಹೇಳಿದ್ದು. ನಾವೇನಯ್ಯ! ಜಂಭ ಕೊಚ್ಚಿದ್ದು" ಎಂದೆ.

"ಅದೇ ಅಮೇರಿಕಾ ಪ್ರವಾಸ ಮಾಡಿದಾಗ ನಮ್ಮ ನೆಹ್ರೂಗೆ ೧೯ ಕುಶಾಲು ತೋಪು ಹಾರಿಸಿದರು. ಅಮೇರಿಕನ್ನರ ಹೃದಯದ ಮೇಲೇ ದಿಗ್ವಿಜಯ ಮಾಡಿದರು" ಅಂತ ನೀವೆಲ್ಲಾ ಜಂಭ ಕೊಚ್ಚುಕೊಳ್ಳಲಿಲ್ಲವೇ?

ಆಗಲೇ ನಾನನ್ನಲಿಲ್ಲವೇ? ಅಮೇರಿಕನ್ನರು ಪಂಡಿತಜೀಯನ್ನು ತಾಜಾ ಮಾಡುಕ್ಕೋಸ್ಕರ ಇದೆಲ್ಲಾ ಮಾಡಿದ್ದು. ಸುತ್ತಿಗೆ ಕುಡುಗೋಲಿಗೆ ಭಾರತ ಬಲಿ ಬೀಳದೆ ಇರಲಿ ಅಂತ ಅವರು ಮಾಡಿದ್ದು—ಅಂತ

ನನ್ನ ನೀವೆಲ್ಲಾ ಹೊಡೆಯುಕ್ಕೆ ಬಂದುಬಿಟ್ಟಿರಿ. ಆಗ ಕಿಟಕಿ ಹಾರಿ ಹೋಗಿ ಮೂರು ದಿವಸ ಮನೆ ಬಿಟ್ಟುಬರಲಿಲ್ಲ ನಿಮ್ಮ ಭಯದಿಂದ.

ಈಗ ನೋಡಿ! ಪರ್ಷಿಯಾದ ಷಾ ಅಮೇರಿಕಾಕ್ಕೆ ಹೋದರೆ ಅವನಿಗೆ ೨೧ ಕುಶಾಲ್ ತೋಪು. ನಮಗಿಂತ ಎರಡು ಹೆಚ್ಚು—ಅದೇ ಸ್ವಾಗತ– ಅದೇ ಅಭೂತ ಪೂರ್ವ ಆದರ. ಎರಡು ಹೆಚ್ಚು ಯಾಕೆ ಗೊತ್ತೆ? ಷಾ ಹತ್ತಿರ ಪೆಟ್ರೋಲಿದೆ. ನಮ್ಮ ಹತ್ತಿರ ಇದ್ದಿದ್ದು ಮಾತು ನಯವಾದ ಮಾತು. ಅಷ್ಟೇ ನೋಡಿ!

ಅಂತ ಧೈರ್ಯವಾಗಿ ಅಂದವನೇ ಮನೆಗೆ ಓಡೇಹೋದ, ನಾವು ಮರು ಮಾತಾಡುವ ಮುನ್ನ

*　　*　　*

"ಈ ತಮಿಳು ನಾಡಾರ್ ಅವರು ಬಹು ಶಹಣೆ ಅಪ್ಪಾ!" ಅಂದ ಕೊರವ, ದಿನ ಪತ್ರಿಕೆಯನ್ನು ಮುದುರಿ ಇಡುತ್ತಾ

ಯಾಕೆ? ಅಂತಂದೆ.

"ನೋಡಿ, ಆಂಧ್ರದಲ್ಲೆಲ್ಲಾ ಚಂಡಮಾರುತದ ಹಾವಳಿ. ಇನ್ನು ಅಲ್ಲಾದ ನಷ್ಟವನ್ನೆಲ್ಲಾ ಸರಿಪಡಿಸಬೇಕಾದರೆ ಕೋಟ್ಯಾಂತರ ರೂಪಾಯಿ ಬೇಕು.

ಮೂರು ನಾಲ್ಕು ವರ್ಷವಾದರೂ ಬೇಕು. ಈ ಸಮಯದಲ್ಲಿ ಆಂಧ್ರಪ್ರಾಂತಕ್ಕೆ ಬೇಗ ಬೇಗ ಒಪ್ಪಿಗೆ ಕೊಟ್ಟರೆ ದೋಸ್ತಿಗೆ ದೋಸ್ತಿನೂ ತೋರಿಸಿದ ಹಾಗಾಯ್ತು —ನಮ್ಮ ಹಣ ನಮ್ಮಲ್ಲೇ ಉಳಿದೂ ಉಳಿಯಿತು."

"ಇದು ಬರೀ ಕುಹಕ" ಎಂದೆ.

"ಹೌದು! ಹೌದು! ಒಲ್ಲದವರು ಇದನ್ನು ಕುಹಕ ಎನ್ನುತ್ತಾರೆ—ಉಳಿದವರು ಇದನ್ನು ಜಾಣತನ ಎನ್ನುತ್ತಾರೆ" ಅಂದ ಕೊರವ

* * *

"ಕನ್ನಡ ಕವಿ ಕೋಗಿಲೆಗಳಿಗೆ ಒಳ್ಳೆ ಸೊಂಪು ಈಗ" ಅಂದ ಕೊರವ, ತನ್ನ ಹಾಸನ್ ಟೋಪೀನ ಮೇಜಿನ ಮೇಲೆಸೆಯುತ್ತಾ.

"ಈಗೇನು ಬಂತು ಸೊಂಪಿನ ಕಾಲ" ಅಂದೆ

"ನೋಡು! ತಮಿಳಿನವರು ಆಂಧ್ರ ಪ್ರಾಂತ್ಯ ಒಪ್ಪಿಕೊಂಡರು ಅಂದರೆ ಅವೆರಡು ಪ್ರಾಂತ್ಯಾನೂ ಆದ ಹಾಗೆ! ಕನ್ನಡ ಪ್ರಾಂತ್ಯವೂ ಈ ಗಲಾಟೇಲಿ ಆಗಬೇಕಾಗಿತ್ತು. ಆದರೆ, ಮಹಾ ಕರ್ನಾಟಕದ ರಾಜಕಾರಣ ಧುರೀಣರು, ಮಿೂನ, ಮೇಷ—ಈಗಲೋ ಆಗಲೋ—ಬೇಕೋ ಬೇಡವೋ? ಅವರು ನಮ್ಮನ್ನು ಸೇರಬೇಕೋ? ನಾವು ಅವರನ್ನು ಕೂಡಬೇಕೋ? ಎಂದು ದ್ವಂದ್ವ ದಲ್ಲಿದ್ದಾರೆ. ಕನ್ನಡ ಕವಿ ಗಜಗಳಿಗೆ ಇದೊಳ್ಳೇ ಕಬ್ಬಿನ ಜಲ್ಲೆ. ಒಬ್ಬೊಬ್ಬರೂ ಕನ್ನಡಮ್ಮನ, ಮಹಾ ಕನ್ನಡಮ್ಮನ ಮೇಲೆ ಪದ್ಯ ಬರೆದಿದ್ದೂ ಬರೆದಿದ್ದೆ—ಜಾಹಿರಾತು ಸಿಗದ ಪತ್ರಿಕೆಗಳಲ್ಲಿ ತುಂಬಿದ್ದೂ ತುಂಬಿದ್ದೆ— ನೃಪತುಂಗನನ್ನು ಬಯಲಿಗೆಳೆದಿದ್ದೂ ಎಳೆದಿದ್ದೆ—ಪಂಪನ ಸಹಸ್ರ ವರ್ಷಾಬ್ದೀಕವನ್ನು ಪಂಚ್ಮಿ ಪಂಚ್ಮಿಗೂ ಎಳೆದಿದ್ದೂ ಎಳದಿದ್ದೆ—ಕವಿಗಳಿಗೆ ಸೊಂಪಲ್ಲವೇ ಈಗ" ಅಂದ

'ಇವನ ತಲೆ ಎಲ್ಲೋ ಸ್ವಲ್ಪ ಕೆಟ್ಟಿದೆ, ಅಂದುಕೊಂಡು' ಮಹಾ ಕರ್ಣಾಟಕ ನಿರ್ಮಾಣ ಆಗಿದ್ದರೆ ತಾನೇ ಕವಿಗಳು ಹಾಡೋದು ಬಿಡ್ತಾ ಇದ್ದರೆ" ಎಂದೆ,

"ಮಹಾ ಕರ್ಣಾಟಕ ಆಗಿದ್ದರೆ, ಕವಿಗಳಿಗೆಲ್ಲಾ ಉಪಯುಕ್ತವಾದ ಕೆಲಸ ಸಿಗೋದು. ಕವನಕ್ಕೆ ಯಾರು ಕೈ ಹಾಕ್ತಾ ಇದ್ದರು" ಅಂದ

ನನಗೂ ಕೋಪ ಬಂತು ' "ತೀಟೆ ತೀರಿಸಿಕೊಳ್ಳುಕ್ಕೆ" ಅಂದೆ

* * *

——0——

# ಕೈಲಾಸಂ ಗರಡಿ

'ಬೈಸೆಪ್ಸಿಗೂ ಬೋಂಡಾಗಳಿಗೂ ಬಲಿ ದೂರ' ಅಂತಂದ ನಮ್ಮ ಪೋಲಿ ಕಿಟ್ಟಿ. ಆದ್ರೂ ಬೈಸೆಪ್ಸ್ ಬಲಿತೋರು ಬೋಂಡಾ ತಿಂದರೂ ಏನೂ ಬಾಧಕ ಇಲ್ಲ—ಅಂತಂದ, ಅವನೇ. ಇದೇನೋ ನಿಜ. ಆದ್ರೆ, "ಮಾಂಸದ ಬೆಳವಣಿಗೇಗೂ, ಮಿದಳಿನ ಬೆಳವಣಿಗೇಗೂ ಎಣ್ಣೆ ಸೀಗೆ" ಅನ್ನೋದು ಮಾತ್ರ—ಹಾಗೆ ಹೇಳಿದವರನ್ನ ನಾವೇನೂ ಪೋಲಿ ಅಂತ ಕರೀಬೇಕಾದ್ದಿಲ್ಲ—ಆದರೆ ಆ ಮಾತು ಮಾತ್ರ, ಸುತರಾಂ ಸರ್ವತ್ರ ಸತ್ಯ ಅಲ್ಲ.

ಈಗ ಒಂದು ಸಾವಿರ ವರುಷದ ಹಿಂದೆ ನಮ್ಮ **ಪಂಪ** ಅಂತ ಇದ್ದ. ಈ ಕಡೆ ಕತ್ತಿ ಹಿಡಿದು ಹೋಗಿ ಯುದ್ಧದಲ್ಲಿ ಶತ್ರುಗಳನ್ನು ಕತ್ತರಿಸಿದ, ಆ ಕಡೆ ಕಂಟ ಹಿಡಿದು ಕೂತು ಎರಡು ಮಹಾಕಾವ್ಯ ಬರೆದ. ಅವನಾದ ಮೇಲೆ ಬಂದರು—**ನಾಗವರ್ಮ** ಅಂತ, **ಜನ್ನ** ಅಂತ. ಅವರೂ ಹಾಗೇ. ಕತ್ತಿ ಅಂದರೆ ಅದಕ್ಕೂ ಸೈ, ಓಲೆ ಕಂಟ ಅಂದರೆ ಅದಕ್ಕೂ ಸೈ.

ಇನ್ನೊಬ್ಬ—ಗದುಗಿನ ಹತ್ತಿರ ಕೋಳೀವಾಡ ಅಂತ ಹಳ್ಳಿ. ಅಲ್ಲಿಗೆ ಶ್ಯಾನುಭೋಗ. **ನಾರಣಪ್ಪ** ಅಂತ ಹೆಸರು. ಬರೆದ ನೋಡಿ—ಮಹಾರಾಯ ಮಹಾಭಾರತಾನ—ಯಾರಿಗೆ ಗೊತ್ತಿಲ್ಲ? "ಶ್ರೀವನಿತೆಯರಸನೆ... " "ಅರಸುಗಳಿಗಿದು ವೀರ .. " ಯಾರಿಗೆ ಗೊತ್ತಿಲ್ಲ?

ಅಷ್ಟು ದೂರ ಯಾಕೆ, ಸಾರ್....ಈಗ್ಗೈವತ್ತು ವರುಷದ ಹಿಂದೆ....ಆ ಉಡುಪಿ ಶಾಲೇಲಿ ಆ ಡ್ರಿಲ್ ಮೇಷ್ಟರು ...**ನಂದಳಿಕೆ ಲಕ್ಷ್ಮೀ ನಾರಣಪ್ಪ**. ಆ ಕಡೆ ಕುಸ್ತೀ ಕಲಿಸ್ತಾ....ಈ ಕಡೆ ರಾಮಾಶ್ವಮೇಧ ಬರೀತಾ ಇರಲಿಲ್ವೇ! ಇವತ್ತಿಗೂ ಆ ನಂದಳಿಕೆ ಹೆಸರು ಹೇಳ್ಕೊಂಡೇ ಅಲ್ವೇ ನಾವು ಕನ್ನಡದ ಮನೇಲಿ ನಂದಾದೀಪ ಹಚ್ಚೋದು!

ಐವತ್ತು ವರುಷಾನೂ ಬಹಳ ಹಿಂದೆ ಅನ್ನಿಸಿದರೆ, ಬೇಡ ...ಮೂರು ವರುಷ ಹಿಂದೆ....ಆ **ಕೈಲಾಸಂ** ...ಫುಟ್ಬಾಲು, ಕಿರಿಕಟ್ಟೆ, ಹಾಕಿ, ಬಿಲಿಯಡ್ರ್ಸ್, ಬೈಸೆಪ್ಸು, ಬುಲ್‌ಬುಲ್ ತರಂಗು, ಬಯೂಸ್ಕೋಪು, ನಾಟಕ, ಕವಿತೆ, ಕತೆ... ಅದೇನು ಪುರಾಕೃತ ಪುಣ್ಯಾನೋ....ಈಚೆ ಮೈಯೂ ಗಟ್ಟಿ, ಆಚೆ ಮಿದುಳೂ ಗಟ್ಟಿ....ಹೃದಯ ಮಾತ್ರ ಹೂವಿನ ಹಾಗೆ.

ಅಲ್ಲಾ, ಯಾಕೆ ಹೇಳೋಕೆ ಬಂದೆ ಅಂದ್ರೆ, ಈ ಮೇಲೆ ಹೇಳಿದೆನಲ್ಲಾ ಇವರ ಗರಡೀಗೆ ಸೇರಿದೋರೊಬ್ರು ಈ ತಿಂಗಳಲ್ಲಿ, ಕೈಲಾಸಂ ಮೂರು ವರ್ಷದ ಹಿಂದೆ ತೀರಿಕೊಂಡ ಈ ತಿಂಗಳಲ್ಲಿ, "ಇದು ನನ್ನ ಗುರುಗಳಿಗೆ, ಇದು ನನ್ನ

ಗೆಳೆಯರಿಗೆ, ನಂ ಕೈಲಾಸಂಗೆ, ನನ್ನ ಕಾಣಿಕೆ" ಅಂತ....ದೇವಸ್ಥಾನಕ್ಕೆ ಒಂದು ಹಾಳು ಬಿಡೋ ಹಾಗೆ ಒಂದು '**ದೆಯ್ಯದ ಮನೆ**" ಬಿಟ್ಟಿದ್ದಾರೆ.

ಬೆಂಗಳೂರಿನಲ್ಲಿ ವ್ಯಾಯಾಮಶಾಲೆ ಇಟ್ಟಿದ್ದಾರೆ—**ಕೆ. ವಿ. ಅಯ್ಯರ್** ಅಂತ ಕೇಳಿರಬೇಕು. ಇವರೂ ಒಬ್ಬರು ಕೈಲಾಸಂ ಹಾಗೇ ಖದೀಮರು. ಕೈಲಾಸಂ, ನಮಗೊಂದು ಹಾಳುಕೆರೆ ಕೊಟ್ಟು ಹೋದರು, "ತಾವರೆಕೆರೆ" ಅಂತ. ಅದರಲ್ಲಿ ಶೇಕದಾರ್ ಶಾಮಣ್ಣ, ದೊಡ್ಡಟ್ಟಿ ಬೋರೇಗೌಡ, ಚಿಲ್ರೆ ಅಂಗ್ಡಿ ಆದಿಮೂರ್ತಿ, ಶಾನುಭೋಗ ಸುಬ್ಬಾಭಟ್ರು, ಬೆಲ್ಲದ ಕಂಟ್ರಾಟ್ ಗಡF ಖಾನ್ ಅಂತ ಒಂದು ಐದು ಕಮಲ ನೆಟ್ಟು ಹೋದ್ರು. ಇವರು, ಕೆ. ವಿ. ಐಯ್ಯರ್, ಒಂದು "ದೆಯ್ಯದ ಮನೇನ" ಬಿಟ್ಟುಕೊಟ್ಟಿದ್ದಾರೆ. ಬಳೇಪೇಟೆ ಗರಡಿಯೋನು ಪುಟ್ಟಮಲ್ಲ, ಕಮಲಾಚತ್ರದ ಕಾವಲುಗಾರ ಚಿನ್ನಯ್ಯ, ಕತೆ ಹೇಳೊ ಯೆಂಗ್ಟೇಶೂ, ಈ ದೊಡ್ ಕಮಲಗಳ ಜೊತೆಗೆ ಇನ್ನೂ ಎಳೆಂಟು ಮೊಗ್ಗು ಇಲ್ಲಿ ಇವೆ.

ಛೆ! ಸುಮ್ಮನೆ ಹೇಳಿದ್ದು ಕೇಳೋದ್ರಲ್ಲಿ ಏನು ಬಂತು, ಸಾರ್, ಖುಷಿ? ಬರಬೇಕು, ಕಾಸು ಕೊಟ್ಟು ಬರಬೇಕು! ಬಂದು ಕಾಣಬೇಕು, ಕಂಡು ಕಿರಿಚಿಕೋಬೇಕು! ಅದು ಖುಷಿ!

ದಿನ ಚೆನ್ನಾಗಿದೆ—"**ಆಷಾಢ ಬಹುಳ ಅಮಾವಾಸ್ಯೆ**".

ಸ್ಥಳ ಪ್ರಶಸ್ತವಾಗಿದೆ—"**ದೆಯ್ಯದ ಮನೆ**".

ಮನೆ ಮಾರೋವ್ರು—"**ಹಿಂದ್ ಕಿತಾಬ್ಸ್, ಬೆಂಗಳೂರು 2**".

ಬೆಲೆ ಕಡಿಮೆ—"**ಒಂದೇ ರೂಪಾಯಿ**".

— ತುತೂರಿ.



# ಸತಿಪತಿಯರ ಸಂವಾದ

" ಏನೂ ಅಂದ್ರೆ, ಈ ಕೆಲಸಕ್ಕಾದರೂ ನೀವು ಪ್ರಯತ್ನ ಪಡಬಾರದೆ?"

" ಯಾವುದಕ್ಕೇ?"

" ಈ ಪತ್ರಿಕೇಲಿದೆ ನೋಡಿ. ಆಹಾರದ ಇಲಾಖೆಗೆ ಒಬ್ಬ ಹಿರಿಯಧಿಕಾರಿ ಬೇಕಂತೆ. ಸಂಬಳ ಏನಾದರೂ ಕೊಡಲಿ, ಒಳ್ಳೆ ಅಕ್ಕೀನಾದರೂ ಎರಡು ದಿವಸ ತಿಂದು ಸಾಯೋಣ. ನಿಮ್ಮ ಜತೆಯವರಿಗೆಲ್ಲಾ ಒಳ್ಳೊಳ್ಳೆ ಕೆಲಸ ಸಿಕ್ಕಿದೆ. ಎರಡೇ ತಿಂಗಳು ಜೈಲು, ಅದೂ ಒಂದೇ ಸಲ ಅನುಭವಿಸಿದವರೆಲ್ಲಾ ದೊಡ್ಡ ದೊಡ್ಡ ಬಂಗಲೆಗಳಲ್ಲೇ ಇದಾರೆ. ನೀವು ಮೂರು ಸಲ ಜೈಲಿಗೆ ಹೋಗಿ ಬಂದಿದ್ದೀರಿ ಒಂದು ಸಲ ನನ್ನನ್ನೂ ಕರೆದುಕೊಂಡು ಹೋಗಿದ್ದಿರಿ. ಒಟ್ಟು ಆರು ವರ್ಷ ಜೈಲುವಾಸ. ಒಂದು ಸಲ ಜೈಲು ಗೋಡೆ ಹಾರಿ ತಪ್ಪಿಸಿಕೊಂಡು ದೇಶಸೇವೆ ಮಾಡಿದ್ದೀರಿ. ನೀವು ಹೋಗಿ "ಹೀಗ್ಹೀಗೆ ಮಾಡಿದ್ದೇನೆ. ನನ್ನ ಹೆಂಡತಿ ಕೂಡ ದೇಶಕ್ಕಾಗಿ ಜೈಲಿಗೆ ಹೋಗಿದ್ದವಳು. ಈಗ ಈ ಕೆಲಸ ಖಾಲಿ ಇದೆ. ನನಗೆ ಕೊಡಿ. ನಾನು ಜನತೆಯ ಸೇವೆ ಮಾಡಲು ಈ ಅವಕಾಶ ಕೊಡಿ" ಅಂತ ಕೇಳಿ. ಹೇಗಿಲ್ಲಾ ಅಂತಾರೆ ಅವರು ತಾನೆ?

"ಅದೇನೋ ದಿಟ ಕಣೆ ಕೇಳೋರನ್ನ ಕೇಳಿದರೆ ಈ ಅಲ್ಪದ ಕೆಲಸ ನನಗೆ ಸಿಗೋದು ಕಷ್ಟ ಅಲ್ಲ. ಈ ಟೋಪಿ ಆಣೆ ಇಟ್ಟುಕೊಂಡು ಹೇಳ್ತೀನಿ ನೋಡು, ಯಾರೂ ಈ ಕೆಲಸಕ್ಕೆ ಮುಂದೆ ಬರುಲ್ಲ. ಅತ್ತ ಮೇಲಿನವರ ಹತ್ತಿರ ಬಯ್ಯಿಸಿಕೊಳ್ಳಬೇಕು---ಇತ್ತ ಕೆಳಗಿನವರ ಹತ್ತಿರ ಶಪಿಸಿಕೊಳ್ಳಬೇಕು. ಜನರೆಲ್ಲಾ ಹೊಟ್ಟೆಗಿಲ್ಲ ಅಂತ ಹಾಹಾಕಾರ ಹಾಕ್ತಾರೆ. ಗೋಡೆ ಮೇಲೆ ನನ್ನ ಚಿತ್ರ ಬರೆದು ಮುರದಾಬಾದ್ ಅಂತಾರೆ. ಅದಕ್ಕೇ ಇನ್ನೂ ಸ್ವಲ್ಪ ದಿವಸ ಕಷ್ಟ ಇದ್ದರೂ ಅನುಭವಿಸೋಣ. ಮುಂದಕ್ಕೆ ಉಪಯೋಗ.

"ಹೋಗಿ ಅಂದ್ರೆ! ಬಂದಿದ್ದನ್ನೆಲ್ಲಾ ಬಿಟ್ಟುಬಿಟ್ಟರೆ, ನಾವು ದಿಟವಾಗಲೂ ತ್ಯಾಗಿಗಳು ನಮಗೆ ಆಶೇನೆ ಇಲ್ಲ ಅಂದುಕೊಂಡು ಬಿಟ್ಟರೆ?"

"ಅದಕ್ಕೇ ನೋಡು! ಈ ಕೆಲಸಕ್ಕೆ ಪ್ರಯತ್ನ ಏನೋ ಪಡ್ತೀನಿ, ನನ್ನ ಹಾಗೆ ಇದಕ್ಕೆ ಆ ಗುಬ್ಬಾಲೆಯವನೂ ಪ್ರಯತ್ನ ಮಾಡ್ತಾನೆ. ಆದರೆ ಅವನಿಗೂ ಈ ಕೆಲಸ ಇಷ್ಟವಿಲ್ಲ. ನನಗೆ ಮೊದಲೇ ಇಲ್ಲ. ಕೆಲಸಕ್ಕೆ ಪ್ರಯತ್ನಪಟ್ಟರೆ, ನಮಗೂ ಕೆಲಸದ ಮೇಲೆ ದ್ವೇಷ ಇಲ್ಲ ಅನ್ನೋದು ಹಿರಿಯರಿಗೆ ಮುಂದಟ್ಟಾಗುತ್ತೆ. ಆದರೆ, ಈ ಕೆಲಸ ಸಿಗದ ಹಾಗೂ ನಾವೇ ಏರ್ಪಾಡು ಮಾಡಬೇಕು".

"ಇದೇನು ಅಂದ್ರಿ! ಪ್ರಯತ್ನಾನೂ ಮಾಡಬೇಕು ಅಂತೀರಿ. ಕೆಲಸ ಸಿಗದ ಹಾಗೆ ಆಟಾನೂ ಹೂಡಬೇಕು ಅಂತೀರಿ—ಮಾಲೇನೂ ಹಾಕಬೇಕು ಅಂತೀರಿ—ತಿಗಣೇನೂ ಬಿಡಬೇಕು ಅಂತೀರಿ—ಅರ್ಥವೇ ಆಗುಲ್ಲವಲ್ಲ!"

"ಇದೇನೆ ಮಹಾ ಕಷ್ಟ. ಈ ಕೆಲಸ ನನಗೆ ಕೊಟ್ಟರೆ ಈ ರೀತಿ ನಾನು ಆಹಾರದ ಸಮಸ್ಯೆ ಪರಿಹರಿಸುತ್ತೇನೆ ಎಂದು ಒಂದು ಸಾಧ್ಯವಾಗದೇ ಇದ್ದ ಏರ್ಪಾಡು ಹೂಡಿ ಬಹಿರಂಗ ಸಭೆಗಳಲ್ಲಿ ಭಾಷಣಮಾಡುತ್ತೇನೆ. ಹೀಗೆ ಮಾಡಿದರೆ ಒಬ್ಬೊಬ್ಬನಿಗೂ ದಿನಕ್ಕೆ ಒಂದು ಸೇರು ಅಕ್ಕಿ ಕೊಡುತ್ತೇನೆ ಎಂದು ಹೇಳಿಕೆಗಳು ಕೊಡುತ್ತೇನೆ. ಅಂದರೆ ನನಗೆ ಕೆಲಸದ ಚಪಲ ಇಲ್ಲದೆ ಇಲ್ಲ ಅಂತ ತೋರಿಸಿಕೊಂಡಹಾಗಾಗುತ್ತೆ. ಆದರೆ ಆ ಏರ್ಪಾಡುಗಳಿಗೆಲ್ಲಾ ಪ್ರತಿಯೊಬ್ಬ ಹಿರಿಯಾಳೂ ಸರ್ಕಾರಕ್ಕೆ ತಮ್ಮ ಜಮೀನಿನಿಂದ ಇಷ್ಟು ಅಂತ ಬೆಳೆ ಕೊಡಲೇ ಬೇಕು ಎಂದು ಕಡ್ಡಾಯವಾಗಿ ಹುಕುಂ ಮಾಡುತ್ತೇನೆ. ಇದಕ್ಕೆ ಯಾರೇ ಒಪ್ಪುತ್ತಾರೆ? ಎಲ್ಲರಿಗೂ ಕೈ ಕಚ್ಚುತ್ತೆ, ಜೇಬು ನವೆ ಆಗುತ್ತೆ. ಹೀಗಾಗಿ ಆ ಕೆಲಸ ನನಗೆ ಕೊಡುಲ್ಲ. ಆ ಗುಬ್ಬಾಲೆಯುವನೂ ಬಲು ಘಾಟಿ. ಅವನೂ ಹೀಗೇ ಆಟ ಹೂಡ್ತಾನೆ. ಇಬ್ಬರೂ ಬಚಾವಾಗ್ತೇವೆ".

"ಅಲ್ಲಾ ಅಂದ್ರೆ. ನಿಮ್ಮ ಪಾಡೇನೋ ಸರಿಹೋಯ್ತು. ಆ ಕೆಲಸ ಕಡೆಗೆ ಯಾರಾದರೂ ಮಾಡಬೇಕಲ್ಲ! ಯಾರು ಮಾಡ್ತಾರೆ? ಯಾರು ಸಿಗ್ತಾರೆ."


"ಅದಕ್ಕೇನೆ! ಕಷ್ಟ. ಸರ್ಕಾರಿ ಅಧಿಕಾರಿಗಳಲ್ಲೇ ಒಬ್ಬನ್ನ ಆ ಕೆಲಸಕ್ಕೆ ಕಟ್ಟಿಬಿಡೋದು. ಅವನೇ ಒದ್ದಾಡಿಕೋತಾನೆ."

"ಆಹಾ! ಬಲು ಚಾಣಕ್ಯರೂ ಅಂದ್ರೇ ನೀವು. ಇಷ್ಟು ತಿಳಿದೋರು ಅದೇನು ಗಿಟ್ಟಿಸ್ತೀರೋ ನೋಡ್ತೀನಿ ಯಾವ ಬಂಗಲೇಲಿ ನಾನು ಮೆರೀಬೇಕೋ ಅದೂ ನೋಡ್ತೀನಿ."

—ನಿಶ್ಶಬ್ದ.—

—"ಕುರೀರವವ"

—o—



# ಬೇರೆ ಮನುಷ್ಯನಾದುದು

ಭಗವದ್ಗೀತೆ ಓದಿದ ಮೇಲೆ ಗಾಂಧೀಜಿಯವರು ಮಹಾತ್ಮರಾದರಂತೆ—ರಾಮಕೃಷ್ಣ ಪರಮಹಂಸರನ್ನು ಕಂಡ ವಿವೇಕಾನಂದರು 'ಸ್ವಾಮಿ' ಆದರಂತೆ—ಇದೇ ರೀತಿ ಮದುವೆ ಆದೋರು ಮಾರ್ಪಾಡಾಗುವುದು ನಾವೆಲ್ಲಾ ಕಂಡು ನೋಡಿದ ವಿಷಯ ಅಲ್ಲವೇ? ಆದರೆ ಶುದ್ಧ ಬ್ರಹ್ಮಚಾರಿ ನಮ್ಮ ಸನಕರಾಯ ಮೊನ್ನೆಯಿಂದ ಬೇರೆ ಮನುಷ್ಯ ಆಗಿಬಿಟ್ಟಿದ್ದಾನೆ. ಇದರ ಒಳಗುಟ್ಟು ಪತ್ತೆ ಹಚ್ಚಿದ ಹೊರತು ನನಗೆ ನಿದ್ರೆ ಬರುಲ್ಲ.

ಮೊನ್ನೆ ತನಕ ನಾವಿಬ್ಬರೂ ಒಂದೇ ಹೋಟಲಿಗೆ ಹೋಗಿ ಒಂದೇ ಲೆಕ್ಕದಲ್ಲಿ ಸಾಲ ಬರೆಯುತ್ತಿದ್ದೆವು. ಒಂದೇ ಶಾಲೆಗೆ ಒಟ್ಟಿಗೆ ಐದು ನಿಮಿಷ ಹೊತ್ತಾಗಿ ಹೋಗುತ್ತಿದ್ದೆವು. ಒಟ್ಟಿಗೇ ಪರೀಕ್ಷೆಗೆ ಕಟ್ಟುತ್ತಿದ್ದೆವು. ಒಟ್ಟಿಗೇ ಉತ್ತೀರ್ಣರಾಗುತ್ತಿದ್ದೆವು. ಕಡೇಗೂ ಒಂದು ಸಾರಿ ಇಬ್ಬರೂ ಫಸ್ಟ್ ರ್‍ಯಾಂಕ್ ತೆಗೆದೆವು. ನಾವಿಬ್ಬರೂ ಪಕ್ಕ ಪಕ್ಕದ ಕೊಠಡಿಯಲ್ಲಿದ್ದರೂ ಏಕಾಂಗಿಗಳು. ಷರಟುಗಳೇನೋ ಎರಡಿದ್ದುವು. ಇಬ್ಬರಿಂದ ಒಂದು ಗಾಂಧಿ ಟೋಪಿ, ಒಂದು ಕೇಸರಿ ಟೋಪಿ ಇದ್ದುವು. ಹೀಗೆ ನಾವು ರಾಮಲಕ್ಷ್ಮಣರ ಹಾಗೆ—ಸಚಿವ ಸೋದರಳಿಯ ಇದ್ದ ಹಾಗೆ ಇದ್ದೆವು.

ಆದರೆ ಮೊನ್ನೆಯಿಂದ ಸನಕ ಬೇರೆ ಮನುಷ್ಯ ಆಗಿಬಿಟ್ಟಿದ್ದಾನೆ. ಅಂದರೆ ಹೋಟಲಿಗೆ ಹೋಗೋದು ಬಿಟ್ಟ ಅಂತೀರಾ—ಇಲ್ಲ. ನಶ್ಯ ಹಾಕೋದು ಬಿಟ್ಟ ಅಂತೀರಾ—ಇಲ್ಲ. ಮಿಕ್ಕ ಛಟ ಎಲ್ಲಾ ಬಿಟ್ಟ ಅಂತೀರಾ—ಇಲ್ಲ. ಸಂಗೀತಾಭ್ಯಾಸಕ್ಕೆ ಹಾರ್ಮೋನಿಯಂ ಕೊಂಡ ಅಂತೀರಾ—ಇಲ್ಲ. ಬೋಳಿಸಿದ ಮೀಶೇನ ಬೆಳೆಸಿದ ಅಂತೀರಾ—ಇಲ್ಲ. ಖದ್ದರ್ ಹಾಕುಕ್ಕೆ ಶುರು ಮಾಡಿದ ಅಂತೀರಾ—ಇಲ್ಲ.

ಹೇಗೆ ಹೇಳಲಿ, ಬೇರೆ ಮನುಷ್ಯ ಆಗಿಬಿಟ್ಟಿದ್ದಾನೆ ಅಂತ—ನೋಡುಕ್ಕೇನೋ ಮೊದಲಿದ್ದ ಹಾಗೇ ಇದಾನೆ. ಮೊದಲು ಮಾಡುತ್ತಿದ್ದ ಕೆಲಸಗಳನ್ನೆಲ್ಲಾ ಮೊದಲಿನ ಹಾಗೇ ಮಾಡುತ್ತಿದ್ದಾನೆ. ಆದರೆ ಮಾಡುವ ರೀತಿ, ಧೋರಣೆ, ಅಹಂಭಾವ, ಆತ್ಮವಿಶ್ವಾಸ ಇವೆಲ್ಲಾ ಪ್ರಗತಿಹೊಂದಿ ಮಾರ್ಪಾಡಾಗಿವೆ.

ಅರ್ಥವಾಗಲಿಲ್ಲ, ಅಲ್ಲವೆ! ಉದಾಹರಣೆ ಕೊಡ್ತೇನೆ ಕೇಳಿ. ಮೊದಲೆಲ್ಲಾ ಒಂದು ಅಂಗಡಿಗೆ ಹೋದ ಅನ್ನಿ. ಈ ಪೆನ್ಸಿಲ್ ಎಷ್ಟಯ್ಯಾ! ಎಂದು

ಕೇಳುತ್ತಿದ್ದ ದೈನ್ಯದಿಂದ. ಅಂಗಡಿಯುವನ ಹತ್ತಿರ ಚೌಕಾಶಿ ಮಾಡಿ ಅರ್ಧ ಗಂಟೆ ನಂತರ ಪೆನ್ಸಿಲ್ ಕೊಂಡು ಹೊರಬೀಳುತ್ತಿದ್ದ. ಈಗ ಏನು ಮಾಡು ತ್ತಾನೆ ಗೊತ್ತೆ? ಅದೇ ಅಂಗಡಿಗೆ ನಾಡಾರ್ ಮಂತ್ರಿ ಮನೆಗೆ ಹೋದ ಹಾಗೆ ಹೋಗುತ್ತಾನೆ. ವ್ಯಾಪಾರವೇ ಇಲ್ಲ! ಒಂದು ಪೆನ್ಸಿಲ್ ಕೊಡ್ರಿ ಅಂತಾನೆ—ಒಂದು ರೂಪಾಯಿ ಮೇಜಿನ ಮೇಲೆ ಎಸೀತಾನೆ—ಅವರು ಕೊಟ್ಟ ಚಿಲ್ಲರೇನ ಎಣಿಸದೇ ಜೇಬಿಗೆ ಹಾಕಿಕೊಂಡು ಅರ್ಧ ನಿಮಿಷದಲ್ಲಿ ಹೊರಗೆ ಬರ್ತಾನೆ. ಸಮಗ್ರ ಠೀವಿ, ಠೇಂಕಾರ, ಟೇಕ್ ರಾಕು. ಎಲ್ಲಾ ನೋಡಿದರೆ, ಇವನಿಗೆಲ್ಲೋ ತುಂಬಾ ದುಡ್ಡು ಸಿಕ್ಕಿರಬೇಕು ಅನ್ನಿಸುತ್ತದೆ

ಆದರೆ ನಾನವನಿಗೆ ನೆರಳಿದ್ದ ಹಾಗೆ. ನನಗೆ ತಿಳಿಯದೆ ಏನಾಗಿ ಹೋಗಿದೆ? ಹಣವಂತೂ ಬಂದಿಲ್ಲ. ಈಗಲೂ ಕಾಸಿನ ಮೇಲಿನ ಕಿಲುಬನ್ನ ಪುನುಗು ಅಂತ ಕೂಡಿ ಹಾಕೋ ಚಾಳಿಯುವನೇ? ಆದರೆ ಹಠಾತ್ತಾಗಿ ಮಾರ್ಪಾಡಾಗಿದಾನೆ—ಕಾರಣ?

ಇವತ್ತು ತಡೆಯುಲಾರದೆ ಹೋದೆ. ಅವನ ಕೊಠಡಿಗೆ ಹೋದೆ. ಅವನ ಟ್ರಂಕು, ಬೀರು, ಮೇಜು, ಎಲ್ಲಾ ಕದ್ದು ಹುಡುಕೇ ಬಿಡಬೇಕು ಅಂತ. ಇದರ ಜೀವಾಳ ಕಂಡು ಹಿಡಿಯಲೇಬೇಕು ಅಂತ.

ಅವನಿನ್ನೂ ಮಲಗಿದ್ದ. ಮೇಜಿನ ಮೇಲೆ ದೀಪಾವಳಿ ಸಂಚಿಕೆ ಇತ್ತು. ಸಂಚಿಕೆಯ ಪ್ರಧಾನ ಲೇಖನ "ವರ್ಷ ಭವಿಷ್ಯದ" ಹಾಳೆ ತೆರೆದಿತ್ತು. ಮೇಷ ಲಗ್ನದ ಕೆಳಗೆ ಕೆಂಪು ಪೆನ್ಸಿಲ್ಲಿನಲ್ಲಿ ಎರಡು ಪಂಕ್ತಿಗೆ ರಂಗೋಲಿ ಕಟ್ಟಿದ್ದ.

"ನಿಮ್ಮ ಈ ವರ್ಷದ ಭವಿಷ್ಯ ಬಹಳ ಉತ್ತೇಜನಕರವಾದುದು. ಅದಕ್ಕಾಗಿ ನಿಮಗೆ ಅಭಿನಂದನೆಗಳು ಏನು ಮಾಡಿದರೂ ಸರಿಯೆ, ಯೋಚನೆ ಮಾಡದೆ ಮುನ್ನುಗ್ಗಿ. ಹಿಡಿದಿದ್ದೆಲ್ಲಾ ಹಣವಾಗುತ್ತೆ. ಮುಟ್ಟಿದ ಮೃತ್ತಿಕೆಯೆಲ್ಲಾ ಹೊನ್ನಾಗುತ್ತೆ—ಜವಾನ ಚಾಕರಿ ಕೇಳಹೋದರೆ, ದಿವಾನ್ ಚಾಕರಿ ಸಿಗುತ್ತೆ."

ಅದನ್ನು ನೋಡುತ್ತಲೇ ನನಗೆ ಅರ್ಥವಾಯಿತು. ಸನಕ ಬೇರೆ ಮನುಷ್ಯನಾದುದರ ಮರ್ಮ ತಿಳಿದೇಹೋಯ್ತು.

ವೃಶ್ಚಿಕ ಲಗ್ನದ ಕೆಳಗೆ ಓದಿದೆ—ನಾನು ಮೊದಲಿನಂತೆಯೇ ಇದೇನೆ.

—ಕುಮಾರ್.

---

# ಹೊಸ ಜಂಬ

ನನ್ನ ಸ್ನೇಹಿತರೊಬ್ಬರಿದಾರೆ. ಅವರನ್ನು ಸ್ನೇಹಿತರೆಂದು ಹೇಳಿಕೊಳ್ಳುವುದಕ್ಕೆ ಈಚಿಗೆ ನಾಚಿಕೆಯಾಗುತ್ತಿದೆ. ಇನ್ನೇನೂ ಇಲ್ಲ. ಅವರು ಸಭ್ಯರೆ! ಜೈಲಿಗೆ ಹೋಗಿಬಂದವರು, ಹತ್ತಾರು ಊರು ತಿರುಗಿದವರು, ಹೆಚ್ಚು ವಿದ್ಯೆಗಳನ್ನು ಬಲ್ಲವರು, ಎಲ್ಲ ಸರಿ! ಆದರೆ, ಜಂಭ ಜಾಸ್ತಿ; ಬಡಾಯಿ ವಿಪರೀತ. ಅದೂನೂ, ಈಗಿನ ಕಾಲದ ಬಡಾಯಿ; ಇತ್ತೀಚಿನ ಜಂಭ.

ತಮಗೆ ನಮ್ಮೆಲ್ಲರಿಗಿಂತ ಮಂತ್ರಿಗಳ ಕಟಾಕ್ಷ ದೊರೆತಿದೆ, ದೊರೆಯುತ್ತದೆ, ದೊರೆಯಲೇ ಬೇಕು ಎಂಬ ಹೆಮ್ಮೆ. ಅವರ ಊರಿಗೆ ಮಂತ್ರಿಗಳು ಬಂದಾಗ ತಾವೇ ಹೋಗಿ ಅವರ ಕಾರು ಬಾಗಿಲು ತೆರೆಯುತ್ತಾರೆ; ಅವರ ಬಿಡಾರದಲ್ಲೇ ತಾವೂ ಅಶನವನ್ನು ಪೂರೈಸಿಬಿಡುತ್ತಾರೆ. ಅಲ್ಲೇ ಕೂತು, ಅವರ ಕಿವಿ ಕಚ್ಚುತ್ತಾರೆ. ಅವರ ಜುಟ್ಟೆಲ್ಲ ತಮ್ಮ ಕೈಲಿದೆ ಎಂದು ನಮ್ಮನ್ನು ಹೆದರಿಸಿ, ಸಿಕ್ಕಿದ್ದನ್ನು ಕಬಳಿಸುತ್ತಾರೆ. ಅವರ ಕುಲಗೋತ್ರ ಚೀಲ ಘೋತ್ರ ಎಲ್ಲವೂ ಆ ಮಹಾ ಪುರುಷರದಂತೆಯೇ ಇದೆಯಂತೆ.

ಮೊನ್ನೆ ಅವರು ಜಂಭ ಕೊಚ್ಚಿಕೊಳ್ಳುತ್ತಿದ್ದದ್ದನ್ನು ಕೇಳಿ ನನಗೆ ಆಶ್ಚರ್ಯವಾಯಿತು; ಭಯವೂ ಉಂಟಾಯಿತು ಅನ್ನಿ. "ನೋಡ್ರಪ್ಪ!... .ಮಂತ್ರಿ ಬಂದಾಗ, ನಾನೇ ಹಳ್ಳ ತೋಡಿದ್ದು (ಗಿಡ ನೆಡುವುದಕ್ಕೆ);....ನಾನೇ ಹಗ್ಗ ಕಟ್ಟಿದ್ದು (ರಸ್ತೆ ತೆರೆಯುವುದಕ್ಕೆ ಮೊದಲು) ನಾನೇ ಬೀಗದ ಕೈ ತೆಗೆದದ್ದು ಅವರ ಕೈಯಿಂದ (ಕಟ್ಟಡ ತೆರೆದ ಮೇಲೆ), ನಾನೇ ಕತ್ತರಿ ಕೊಡಿಸಿದ್ದು (ಸೇತುವೆ ತೆರೆದಾಗ), ನಾನೇ ಅವರ ಕೊರಳಿಗೆ ಸುತ್ತಿದ್ದು (ಹೂ ಮಾಲೆಯನ್ನ), ನಾನೇ ಅವರ ಕೈಗೆ ನೀರು ಬಿಟ್ಟಿದ್ದು (ಗಾರೆ ತೊಳೆಯುವುದಕ್ಕೆ), ನಾನೇ ಊರಾಚೆ ವರೆಗೂ ತಳ್ಳಿದ್ದು (ಕಾರು ಕೆಟ್ಟು ಹೋಗಿದ್ದಾಗ), ಕೂಗಬೇಡ್ರಪ್ಪ ಅಂತ ಹೇಳಿ, ಹೆದರಿಸಿದ್ದು (ಅವರನ್ನಲ್ಲ; ಜನಸಂದಣಿಯನ್ನು), ಉದ್ದಕ್ಕೂ ಸಾಲಾಗಿ ಕೂಡಿಸಿದ್ದು (ಸಭೆಗೆ ಬಂದ ಅತಿಥಿ ಅಭ್ಯಾಗತರನ್ನ)" ನನ್ನ ಸುತ್ತ ಕೂತಿದ್ದವರೆಲ್ಲ, ಅವರನ್ನು ರಾಜ್ಯದ ಕಾರಣ ಪುರುಷ ಎಂದೇ ತಿಳಿದು ತುಂಬಾ ಗೌರವಿಸಲು ಪ್ರಾರಂಭಿಸಿದಾರೆ. ಆದರೆ, ಇಂಥವರು ಈಚೆಗೆ ಸಾವಿರಗಟ್ಟಲೆ ಉದ್ಭವಿಸುತ್ತಿದಾರೆ, ಎಂಬುದನ್ನು ಅವರೇನು ಬಲ್ಲರು? ಅವರಿಗೆಲ್ಲ ಕೈಮುಗಿದು, ಧೂಪ ಹಾಕಿ, ಮಣೆಕೊಟ್ಟು, ಮನ್ನಿಸುವುದು ಸಾಧ್ಯವೆ!

— ಹೊಸೂರ್‌ಕರ್.

# ಷಹರಾಚಾರಿಯ ಸಮಸ್ಯೆ

"ಅರ್ಥವೇ ಆಗುಲ್ಲವಯ್ಯಾ! ಈತ ನಾಚಿಕೆ ಇಲ್ಲದೆ ತಲೆ ಎತ್ತಿಕೊಂಡು ದಾರಿಯಲ್ಲಿ ತಿರುಗಾಡೋದೇ ಆಶ್ಚರ್ಯ ಕಣಯ್ಯಾ!" ಅಂದ ರಾಮು.

"ಯಾರನ್ನಂತೀಯೋ? ಷಹರಾಚಾರೀನೇ!" ಅಂದ ಮಲ್ಲಣ್ಣ.

"ಹ್ಞಾ ಕಣೋ. ಅವನ ಕಾರು ನೋಡಿದೆ, ಅದಕ್ಕೇ ಜ್ಞಾಪಕ ಬಂತು —"ಭಲೋ ಮೈಸೂರು" ಅಂದಾಗ ಗಾಂಧಿ ಟೋಪಿ ಹಾಕಿ ಹರಿದಾರಿ ನಡೆದ; —ಜೈಪ್ರಕಾಶ್ ಬಂದಾಗ—"ಕಾಂಗ್ರೆಸ್ಸಿಗೆ ಧಿಕ್ಕಾರ" ಅಂತ ರಸ್ತೆ ಮೂಲೇಲಿ ಅರಚಿದ—ಮೊನ್ನೆ ಸ್ಟಾಲಿನ್ ಫೋಟೋ ಕೊಂಡುಕೊಳ್ಳುತ್ತಾ ಇದ್ದ.— ಇವತ್ತು ಬಹಿರಂಗವಾಗಿ ಹೇಳಿದ್ದು ನಾಳೆಗೇ ಬದಲಾಯಿಸುತ್ತಾನಲ್ಲಯ್ಯಾ! ನಾಚಿಕೆ ಆಗುಲ್ಲವೇ?" ಅಂದ ರಾಮು.

"ಹಾಗಲ್ಲಾ ರಾಮು! ಈ ಷಹರಾಚಾರಿ ನಮ್ಮೂರಿನವನು. ಅವನು ಒಂದು ಸಾರಿ ನನ್ನೆದುರಿಗೆ ಮಾಡಿದ್ದು ಹೇಳುತ್ತೇನೆ ಕೇಳು. ಆ ಮೇಲೆ ಅವನ ಚರ್ಯೆ ಅರ್ಥವಾಗುತ್ತೆ. ದಿಟಕ್ಕೂ ಬಲು ಒಳ್ಳೆಯವ ಅವ "ನಾಸ್ತಿ" ಅನ್ನಲಾರ ನೋಡು. ಅದೇ ಅವನ ಕುಂದು.

ನೋಡು! ಊರಲ್ಲಿದ್ದಾಗ ಒಂದು ಸಲ ದೇವಸ್ಥಾನದ ಪ್ರಾಕಾರದಲ್ಲಿ ಏನೋ ಓದುತ್ತಾ ಕುಳಿತಿದ್ದೆ. ನಿನಗೆ ಗೊತ್ತಲ್ಲ ನಮ್ಮ ಹಳ್ಳಿ, ಅಲ್ಲಿ ಓದೋ ಹುಡುಗರೆಲ್ಲಾ ದೇವಸ್ಥಾನದ ಪ್ರಾಕಾರದಲ್ಲೇ ಓದೋದು, ಮನೇಲಿ ಸೌಕರ್ಯವಿಲ್ಲದ್ದರಿಂದ ಈ ಷಹರಾಚಾರೀನೂ ಅಲ್ಲೇ ಓದುಕ್ಕೆ ಬಂದಿದ್ದ ಏನೋ ಬಣ್ಣ ಬಣ್ಣದ ಪುಸ್ತಕ ಕೈಲಿ ಹಿಡಿದುಕೊಂಡಿದ್ದ ಏನಿರಬಹುದು. ಅಂತ ನೋಡುತ್ತಾ ಇದ್ದೆ. ಅವನ ಪಕ್ಕದಲ್ಲೇ ದೇವಸ್ಥಾನದ ದೊಡ್ಡ ಕೊಳದಪ್ಪಲೆ ಇತ್ತು. ಅಷ್ಟರಲ್ಲೇ ಒಂದು ಇಲಿ ಓಡಿಬಂತು ಆ ಕೊಳದಪ್ಪಲೆ ಗೋಡೆ ಅಂಚಿನಲ್ಲಿತ್ತು. ಅದನ್ನು ಹತ್ತುಕ್ಕೆ ಒದ್ದಾಡುತ್ತಿತ್ತು. ಷಹರಾಚಾರಿ ಅದನ್ನು ನೋಡಿದ. "ಪಾಪ! ಆ ಕೊಳದಪ್ಪಲೇಲಿ ಎರಡು ಅಕ್ಕೀಕಾಳಿರಬಹುದು. ಈಗಿನ ಕಾಲದಲ್ಲಿ ಎರಡು ಅಕ್ಕೀಕಾಳು ಅಂದರೆ ನಿರ್ಲಕ್ಷ್ಯವೇ? ಇಲೀಗೆ ಅದರ ವಾಸನೆ ಬಡಿದಿರಬಹುದು. ಕೊಳದಪ್ಪಲೆ ಹತ್ತುಕ್ಕಾಗುಲ್ಲ ಅದಕ್ಕೆ. ಅಂತ

ಯೋಚನೆ ಮಾಡಿ ಮೆಲ್ಲಗೆ ಈ ಇಲೀನ ತನ್ನ ಸ್ಲೇಟಿನ ಸಹಾಯದಿಂದ ಕೊಳ ದಪ್ಪಲೆ ಒಳಕ್ಕೆ ಬಿಟ್ಟ. ಅಷ್ಟು ಕರುಣಾಮಯಿ ಆತ.

ಆದರೆ ನೋಡು ಇನ್ನೆರಡು ನಿಮಿಷ ಆಯ್ತು. ಒಂದು ಬೆಕ್ಕು ಓಡಿ ಬಂತು. ಅದೂ ಕೊಳದಪ್ಪಲೆ ಹತ್ತಿರ ಕಾಲು ಕೆರೀತಾ ನಿಂತುಕೊಂಡಿತು. ಅದನ್ನೂ ನೋಡಿದ. ಆ ಬೆಕ್ಕಿಗೂ ಕೊಳದಪ್ಪಲೆ ಒಳಕ್ಕೆ ಹಾರಲು ಹೆದರಿಕೆ. ಅಯ್ಯೋ, ಪಾಪ! ಅಂದುಕೊಂಡ ಷಹರಾಚಾರಿ. ಅದಕ್ಕೂ ಅಕ್ಕೀಕಾಳಿ ನಾಸೆ ಇರಬಹುದು ಅಂತ ಅದನ್ನೂ ಮೆಲ್ಲನೆ ಕೊಳದಪ್ಪಲೆ ಒಳಕ್ಕೆ ಬಿಟ್ಟ— ಅಂಥಾ ಕರುಣಾಮಯಿ ಆತ. ಆರ್ತರು ಬಂದರೆ ತನ್ನ ಕೈಲಾದ ಸಹಾಯಕ್ಕೆ "ನಾಸ್ತಿ" ಅನ್ನಲಾರ. ಅದೇ ಅವನ ತಿರುಳು ನೋಡು.

ಈ ಸಂಗತಿಯ ಹಿನ್ನೆಲೆಯಲ್ಲಿ ಅವನ ಜೀವನವನ್ನು ನೋಡು. ಸಮಸ್ಯೆಯೇ ಇಲ್ಲ! ಅಂದ ಮೇಲೆ ಅವನಿಗೆ ನಾಚಿಕೆ ಏಕೆ? "ಛಲೋ ಮೈಸೂರು" ಅಂದರು. ಇವನು ನಾಸ್ತಿ ಅನ್ನಲಾರ ಅವರ ಹಿಂದೆ ಬಿದ್ದ. ಅವರಿಗಿಂತಲೂ ಗಟ್ಟಿಯಾಗಿ ಕೂಗಿದ. ಅವರಿಗೆ ಸಹಾಯವಾಗಲಿ ಅಂತ.

ಜೈ ಪ್ರಕಾಶ್ ಬಂದರು. ಕಾಂಗ್ರೆಸ್ಸಿಗೆ ಧಿಕ್ಕಾರ ಅಂದರು. ತಿಳಿದವರು ಅವರ್‍ಯಾಕೆ ಸುಳ್ಳು ಹೇಳ್ತಾರೆ ಅಂದ. ಇವನೂ "ಧಿಕ್ಕಾರ" ಅಂದ—ಜೈ ಪ್ರಕಾಶರಿಗೆ ಬೆಂಬಲ ಕೊಟ್ಟ.

ನಾಲ್ಕು ಜನ ಕೂಲಿಗಳು ಕುಡಿದು ಕೆಲಸಕ್ಕೆ ಹೋಗದೆ ನಿಂತರು. ಕೆಲಸ ದಿಂದ ವಜಾ ಅಂದರು. ಹರತಾಳ ಅಂದರು. ಇವನು ಅಯ್ಯೋ, ಪಾಪ! ಹೊಟ್ಟೆಗಿಲ್ಲದೆ ನರಳುತ್ತಾರೆ ಪಾಪ! ಅಂತ ಅವರಿಗೆ ಬೆಂಬಲ ಕೊಡುಕ್ಕೆ ಸ್ಟಾಲಿನ್ ಫೋಟೋ ಒಂದು ಕೊಂಡುಕೊಂಡ ಮೆರವಣಿಗೆಗೆ ಅಂತ.

ಇನ್ನೊಬ್ಬ ನರಳುವರಿಗೆ ಸಹಾಯ ಮಾಡಬೇಕೆಂದೇ ಈತನ ಹಿರಿಯಾಸೆ. ಅಂಥಾ ದಯಾಮಯಿ ಆತ.

ರಾಮೂಗೆ ಈಗ ಅರ್ಥವಾಯಿತು. ಷಹರಾಚಾರಿಗಳು ತುಂಬು ಹೃದಯ ದಿಂದ ನಿಷ್ಕಪಟದಿಂದ ಕೆಲಸ ಮಾಡಿದರೂ ಜನ ಯಾಕೆ ಷಹರಾಚಾರೀನ ನೋಡಿ ಜುಗುಪ್ಸೆಪಡುತ್ತಾರೆ ಅಂತ. ಎಷ್ಟೇ ಒಳ್ಳೇ ಮನಸ್ಸಿರಲಿ—ಫಲಿತಾಂಶ ಕೊಳದಪ್ಪಲೇಲಿ ಇಲೀನೂ ಬೆಕ್ಕನ್ನೂ ಬಿಟ್ಟಹಾಗೇ ಅಲ್ಲವೇ? ಅನ್ನಿಸಿತು.

— ಶಿವಣ್ಣ.

# ಮಂಡಲದ ಬಡಾವಣೆ

ಮದ್ರಾಸ್ ಪ್ರಾಂತದ ಸೆಕ್ರಟೇರಿಯಟ್ ನೌಕರರು ಮೊನ್ನೆ ಸಭೆ ಸೇರಿ, ಸರ್ಕಾರಿ ನೌಕರರ ಹಿತರಕ್ಷಣೆಗಾಗಿಯೇ ಒಬ್ಬರು ಪ್ರತ್ಯೇಕ ಸಚಿವರನ್ನು ವಿಾಸಲಾಗಿರಿಸಬೇಕೆಂದು ಪ್ರಧಾನ ಮಂತ್ರಿಗಳಲ್ಲಿ ಮನವಿಮಾಡಿಕೊಂಡರು. ಈ ಸುದ್ದಿ ದೇಶದ ನೂರಾರು ಸಂಘ ಸಮ್ಮೇಲನಗಳಿಗೆ ಮಾರ್ಗದರ್ಶಕವಾಗಿವೆ. ಹಾಗೆಯೇ, ಲಕ್ನೋದಲ್ಲಿ ಈಚೆಗೆ ನಡೆದ ಪೂರ್ವ ಏಷ್ಯಾ ಸಹಕಾರ ಸಂಘಗಳ ಮಹಾ ಸಮ್ಮೇಲನ ಸಹಕಾರ ಸಂಘಗಳ ಸ್ಥಾಪನೆ, ಉದ್ಯಾಪನೆ, ವ್ಯಾಪನೆಗಳಿಗಾಗಿಯೇ ಪ್ರತಿ ಪ್ರಾಂತದಲ್ಲೂ ಒಬ್ಬ ಮಂತ್ರಿ ಇರಬೇಕೆಂದು ಒತ್ತಾಯಪಡಿಸಿದರು. ಮೈಸೂರಲ್ಲಿ ಸೇರಿರುವ ಪೂರ್ವ ಪ್ರಪಂಚದ ವಯಸ್ಕರ ಶಿಕ್ಷಣ "ಶಿಕ್ಷಣ ಶಿಬಿರ"ವೂ ಕೂಡ, ವಯಸ್ಕರ ಶಿಕ್ಷಣಕ್ಕಾಗಿಯೇ ಎಲ್ಲೆಲ್ಲೂ ಪ್ರತ್ಯೇಕ ಮಂತ್ರಿಗಳಿರಬೇಕೆಂದು ಘೋಷಿಸಬಹುದು. ಅಖಿಲಭಾರತ ಮಹಿಳಾ ಸಂಘ, ಅಖಿಲಭಾರತ ಕಾರ್ಮಿಕ ಸಂಘ, ಅಖಿಲಭಾರತ ಯುವಕ ಸಂಘ, ಅಖಿಲ ಭಾರತ ಟಿಕೇಟ್ ಇಲ್ಲದೆ ಪ್ರಯಾಣ ಮಾಡುವವರ ಸಂಘ, ಅಖಿಲಭಾರತ ಸಿನಿಮಾ ತಾರೆಯರ ಸಂಘ ಮುಂತಾದುವೆಲ್ಲ ಆಗಲೇ ಹೆಂಗಸರು, ಕೂಲಿಗಾರರು, ಹುಡುಗರು, ಬಡವರು, ನಕ್ಷತ್ರಗಳು ಇವರನ್ನು ಪ್ರತ್ಯೇಕವಾಗಿ ಮಂತ್ರಿಪದವಿಗಿಳಿಸಬೇಕೆಂದು ಕೇಳಿಕೊಂಡಿದಾರೆ. ಬಿರುಗಾಳಿಗಳನ್ನು ತಡೆಯುವುದಕ್ಕಾಗಿಯೇ ಒಬ್ಬರು ಮಂತ್ರಿ ಇದ್ದಿದ್ದರೆ, ಆಂಧ್ರ ಸಮುದ್ರ ತೀರದಲ್ಲಾದ ಬಿರುಗಾಳಿ ಅಲ್ಲಿಗೆ ಹೊಡೆಯುತ್ತಲೇ ಇರಲಿಲ್ಲ ಎಂದು ತೆಲುಗರು ಹೇಳುತ್ತಿದಾರೆ. ಹಾಗೆಯೇ, ಕಾಲರಾ ರೋಗ ನಿವಾರಣಾ ಮಂತ್ರಿ ಎಂದು ಒಬ್ಬರಿದ್ದಿದ್ದರೆ, ಮಾದೇಶ್ವರನ ಬೆಟ್ಟದ ದೀಪಾವಳಿ ಜಾತ್ರೆಯಿಂದ ಮೈಸೂರಿಗೆ ಕಾಲರಾ ಬರುತ್ತಲೇ ಇರಲಿಲ್ಲವೆಂಬುದು ಅನೇಕರ ದೃಢ ನಂಬಿಕೆಯಾಗಿದೆ.

ಅನೇಕ ಪ್ರಾಂತಗಳಲ್ಲಿ ಈಗ "ಕಂಟ್ರಾಕ್ಟರುಗಳ ಸಮ್ಮೇಲನ" ನಡೆಯುತ್ತಿದೆ. ಅಲ್ಲೆಲ್ಲ ಒಂದು ಠರಾವು ಅಂಗೀಕರಣ ಪಡೆಯುತ್ತಿದೆ. ಅಡಿಪಾಯದ ಕಲ್ಲನ್ನು ನೆಡುವುದಕ್ಕಾಗಿಯೇ ಒಬ್ಬರು ಮಂತ್ರಿ ಇರಬೇಕೆಂಬುದೇ ಅವರ ವಾದ. ಹೋಟಲು ಕೆಲಸಕಾರರಂತೂ ಹೋಟಲುಗಳನ್ನು ತೆರೆಯುವುದಕ್ಕಾಗಿಯೇ ಇಬ್ಬರೂ, ಮುಚ್ಚಿಸುವುದಕ್ಕಾಗಿಯೇ ನಾಲ್ವರೂ ಇರಬೇಕೆಂದು ಹೇಳುತ್ತಲೇ ಇದಾರೆ. ರೈಲ್ವೆ ಪ್ರಯಾಣಿಕ ಮಹಾ ಸಭೆಯವರ ಬೇಡಿಕೆ ಕೂಡ, ನ್ಯಾಯವಾಗಿಯೇ ಇದೆ. ಅವರು ಕೇಳುವುದು ಇಷ್ಟೆ. ಗಗನಮಾರ್ಗದಲ್ಲಿ ಗಂಧರ್ವ

ರಂತೆ ಹಲವು ಮಂತ್ರಿಗಳು ಸಂಚರಿಸಿ, ವಾತಾವರಣದ ಪರಿಸ್ಥಿತಿಯನ್ನು ಪರೀಕ್ಷಿಸಿ, ಇಂದ್ರಾದಿಗಳನ್ನು ಸಂದರ್ಶಿಸಿ, ಕಾಲಕಾಲಕ್ಕೆ ಮಳೆ ಬೀಳಿಸಲಿ; ಇನ್ನು ಹಲವರು ಕಲ್ಲೆಣ್ಣೆ ತುಂಬಿದ ಅಮೇರಿಕನ್ ಕಾರುಗಳಲ್ಲಿ ಧೂಳೆಬ್ಬಿಸುತ್ತ ಕಾರಾಡಲಿ! ಆದರೆ, ರೈಲಲ್ಲೇ ಪ್ರಯಾಣಮಾಡುವ ಗಾಂಧಿಜಿಯವರಂತೆ ಕೆಳತರಗತಿಯಲ್ಲೇ ತಿರುಗಾಡುವ, ಒಬ್ಬ ಮಂತ್ರಿಯಾದರೂ ನೇಮಕವಾಗಲೇ ಬೇಕು.

ಇಂಥ ಬೇಡಿಕೆಗಳನ್ನಲ್ಲದೆ, ಮಂತ್ರಿಮಂಡಲವನ್ನು ಬಡಾಯಿಸುವಾಗ, ಇನ್ನೂ ಅನೇಕ ಸಮಸ್ಯೆಗಳನ್ನು ಎದುರಿಸಬೇಕಾಗಿದೆ. ಹಿಂದುಳಿದವರಿಗೆ ಅವರು ಎಷ್ಟು ಹಿಂದುವರಿದಿದಾರೋ ಅಷ್ಟು ಸಂಖ್ಯೆ ಇರಲೇಬೇಕಾಗುತ್ತದೆ. ಮುಂದು ವರಿದವರಿಗೆ ಅವರು ಎಷ್ಟು ಮುಂದುಳಿದಿದಾರೋ ಅಷ್ಟು ಕಡಮೆ ಸಂಖ್ಯೆ ಇರಲೇಬೇಕಾಗುತ್ತದೆ. ಜಾತಿಗೊಬ್ಬ ಮಂತ್ರಿ, ಜಿಲ್ಲೆಗೊಬ್ಬ ಮಂತ್ರಿ ಎಂಬ ಕೂಗು ಬೇರೆ ಎದ್ದಿದೆ. ಎಲ್ಲ ಮಂತ್ರಿಗಳೂ "ಆಹಾರ"ಕ್ಕಾಗಿ, ಎಂಬ ತತ್ವ ವನ್ನು ಒಪ್ಪಿದರೂ ಕೂಡ, ಸೌದೆಗೊಬ್ಬರು, ನಕ್ಕರೆಗೊಬ್ಬರು, ಸಿಮೆಂಟಿ ಗೊಬ್ಬರು, ಎಂಬ ಒತ್ತಾಯವನ್ನು ತಳ್ಳಿಹಾಕುವಂತಿಲ್ಲ. ಎಲ್ಲ ಪ್ರಾಂತಗಳಲ್ಲೂ ಈ ಪ್ರಶ್ನೆಗಳು ಮಹತ್ತರವಾಗಿ ಏಳುತ್ತಿವೆ. ಡೀಮೆಲ್ಲೋ ಎಂಬ ಕ್ರಿಡಾಭಿ ಮಾನಿ ಕ್ರೀಡೆಗಾಗಿಯೇ ಪ್ರತ್ಯೇಕ ಸಚಿವರಿರಬೇಕೆನ್ನುತ್ತಾರೆ. ಸಂತಾನಂರವರು ವಿದೇಶೀ ಪ್ರಯಾಣಿಕರಿಗೆ ಸ್ವಾಗತ ನೀಡಿ, ಅವರಿಂದ ಹಣ ಪಡೆಯಲು ಒಬ್ಬ ಮಂತ್ರಿ ಬೇಡವೆ, ಎಂದು ಕೇಳಬಹುದು. ಹೊಳೆಗೊಬ್ಬ ಮಂತ್ರಿ ಇದ್ದರೆ, ಕಟ್ಟೆ ಕಾಲುವೆ ಕೃಷಿ ಎಲ್ಲಕ್ಕೂ ಅನುಕೂಲ. ಭಾಷೆಗೊಬ್ಬ ಮಂತ್ರಿ ಇದ್ದರೆ, ಆಡುವ ವರಿಗೆ ಸುಲಭ, ನೋಡುವವರಿಗೆ ಸೊಗಸು.

ಅಂತು, ಮಂತ್ರಿಮಂಡಲ ರಚಿಸಿ, ಎಲ್ಲರನ್ನೂ ತೃಪ್ತಿಗೊಳಿಸುವುದು ಬಹು ಪ್ರಯಾಸದ ಕೆಲಸ. ಅಸಾಧ್ಯವೆಂದೇ ಹೇಳಬಹುದು.

—ಕಾಮತ್.

—o—

ಶ್ರೀ ಪ್ರಕಾಶಂ ಅವರು ಆಂಧ್ರ ದೇಶ ಬಿಟ್ಟು ಹೋಗಿದ್ದರಿಂದಲೇ ಅಲ್ಲಿ ಚಂಡ ಮಾರುತಕ್ಕೆ ನೆಲೆ ಸಿಕ್ಕಿತು ಎಂದನ್ನುವುದು ಶುದ್ಧ ಕುಹಕ.

* * *

# “ ಸರ್ವಂ ಸಂಪ್ರದಾಯ ಮಯಂ ”

(ಪತ್ರ ವ್ಯವಹಾರದಲ್ಲಿ)

[A. I. R. ಮದರಾಸು ಕೇಂದ್ರದವರ ಕೃಪೆಯಿಂದ]

---

ಸರ್ವಂ ಸಂಪ್ರದಾಯಮಯಂ! ಹೌದು ಪ್ರಕೃತ ನಮ್ಮ ಪ್ರತಿ ವ್ಯವಹಾರಗಳಲ್ಲೂ ಸಂಪ್ರದಾಯಗಳು ಪ್ರಧಾನ ಪಾತ್ರ ವಹಿಸುತ್ತವೆ. ನಮ್ಮ ತಾತಮುತ್ತಾತಂದಿರಿಂದ ಪರಂಪರೆಯಾಗಿ ಬಂದು ಸೇರಿದ ಸ್ಥಿರ ಆಸ್ತಿ ಈ ಸಂಪ್ರದಾಯಗಳು. ಒಳ್ಳೆಯದಕ್ಕೋ ಕೆಟ್ಟದ್ದಕ್ಕೋ ಹೇಳುವುದು ಕಷ್ಟ. ಅಂತೂ ಬೆನ್ನಹತ್ತಿದ ಬೇತಾಳನಂತೆ ಈ ಸಂಪ್ರದಾಯಗಳು ತಗುಲಿಕೊಂಡು ಬರುತ್ತಿವೆ.

ಪತ್ರವ್ಯವಹಾರದಲ್ಲಂತೂ ಈ ಸಂಪ್ರದಾಯಗಳು ತಮ್ಮದೇ ಆದ ಪ್ರತಿಭೆ ಬೀರಿ ಪ್ರಧಾನಪಾತ್ರ ವಹಿಸುತ್ತವೆ. ವಿಷಯ ಗಂಭೀರವಾಗಲಿ---ರೌದ್ರವಾಗಲಿ —ಶೋಕದ್ದಾಗಲಿ — ನಗುವಿನದಾಗಲಿ — ಹೆಣ್ಣಿನದಾಗಲಿ —ಗಂಡಿನದಾಗಲಿ ಪತ್ರ ಒಂದು ಸಂಪ್ರದಾಯದ ಸುಳಿಗೆ ಸಿಕ್ಕು ತಪ್ಪಿಸಿಕೊಳ್ಳಲಾರದೆ ತೊಳಲುತ್ತದೆ.

ಕೇವಲ ಬಾಲಕರಿರುವಾಗಲೇ ಈ ಸಂಪ್ರದಾಯ ಬದ್ಧವಾದ ಪತ್ರವ್ಯವಹಾರದ ಅಭ್ಯಾಸಕ್ಕೆ ಪ್ರಾರಂಭ—“ಮಗೂ ಕಾಗದಾ ಬರೆಯೋದನ್ನ ಅಭ್ಯಾಸ ಮಾಡಪ್ಪ” ಎಂದೋ ಅಥವ “ನೀವು ನೋಡಿರುವ ರಥೋತ್ಸವದ ವಿಷಯ ಕುರಿತು ನಿಮ್ಮ ಅಕ್ಕನಿಗೆ ಒಂದು ಪತ್ರ ಬರೆಯಿರಿ” ಎಂದೋ ಪಾಠಕ್ಕೆ ಪ್ರಾರಂಭ. ಆ ಹುಡುಗರು ಎಡಗಡೆ ಮೂಲೆಯಲ್ಲಿ ಕ್ಷೇಮ ಎಂದು ಬರೆದು, ಮಧ್ಯೆ ಶ್ರೀಕಾರ ಹಾಕಿ—ಹರಿದ್ರಾ ಕುಂಕುಮ ಶೋಭಿತಳಾದ ಅಕ್ಕನವರಿಗೆ ಬಾಲಕನ ಸಾಷ್ಟಾಂಗ ನಮಸ್ಕಾರ ಹಾಕಿ ಉಭಯತರ ಕುಶಲೋಪರಿಯ ಸಾಂಪ್ರತ ವಿಚಾರಿಸಿ— ಅವರ ಆರೋಗ್ಯಕ್ಕೆ ಆಗಿಂದಾಗ್ಯೆ ಕಾಗದಾ ಬರೆಯುತ್ತಿರುವಂತೆ ಅಂಗಲಾಚಿ ಪ್ರಾರಂಭಿಸುವುದು ಸಂಪ್ರದಾಯ ಇನ್ನು ತೇರಿನಲ್ಲಿ ನೆರೆದ ಹತ್ತೂ ಸಮಸ್ತರ ಭಕ್ತಿಯ ವರ್ಣನೆ—ದೇವರ ವರ್ಣನೆ ಕೇವಲ ಸಂಪ್ರದಾಯಕ್ಕಾಗಿ ಕಾಗದಾ ತುಂಬಿದ ಕಿಲಾಡಿತನ. ಅಷ್ಟಲ್ಲದೆ ಇನ್ನೇನು? ಆ ಪತ್ರ ಬರೆದ ಬಾಲಕನ ನಿಜವಾದ ಆಸೆ, ತಾನು ತೇರಿನ ಮೇಲೆ ಕುಳಿತ ಪೂಜಾರಿಯ ಜುಟ್ಟಿಗೆ ಗುರಿ ಇಟ್ಟು ಬಾಳೆಹಣ್ಣಿನಿಂದ ಹೊಡೆಯುವದೇ ಆಗಿರುತ್ತದೆ.

ಹೀಗೆ ಬಾಲ್ಯದಿಂದ ಹುಡುಗರಿಗೆ ಸಂಪ್ರದಾಯ ಹಾಕಿ ಕೊಡುವುದು ಒಂದು ವಿಧದಲ್ಲಿ ಮುಂದು ಹೇಳಿಕೊಟ್ಟಹಾಗೇ—ಹೇಗೆಂದರೆ, ಶ್ರೀಕಾರ, ಕ್ಷೇಮ, ಉಭಯ ಕುಶಲೋಪರಿ ಸಾಂಪ್ರತ, ಬಾಲಕನ ಸಾಷ್ಟಾಂಗ ನಮಸ್ಕಾರ, ಇಲ್ಲಿ ಎಲ್ಲರೂ ಕ್ಷೇಮ ನಿಮ್ಮ ಕ್ಷೇಮಕ್ಕೆ ಆಗಿಂದಾಗ್ಗೆ ಪತ್ರ ಬರೆಯುತ್ತಿರಬೇಕೆಂದು ಬರೆದು ಮುಗಿಸುವ ಹೊತ್ತಿಗೆ ಒಂಭತ್ತು ಕಾಸಿನ ಕಾರ್ಡು ಮುಗಿದು ಹೋಗಿರುತ್ತದೆ. ಮುಖ್ಯ ವಿಷಯವಾದ "ತಂಗಚ್ಚಿ ಗಂಡು ಮಗು ಹೆತ್ತಳು" ಎಂಬ ವಿಷಯವನ್ನೇ ಬರೆಯಲು ಜಾಗ ಸಾಲದೆ ಕೊಟ್ಟ ಒಂಭತ್ತು ಕಾಸು ಕಾರ್ಡು ಸಾಲದೇ ಎಂದು ಬಿಸಿಸುಯ್ಯಬೇಕಾಗುವುದಲ್ಲದೆ, ಈ ಸಂಪ್ರದಾಯ ಶರಣು ಹೊಕ್ಕುದುದಕ್ಕೆ ಎರಡಾಣೆ ಖರ್ಚುಮಾಡಿ ಕವರು ಬರೆಯಬೇಕಾಗುತ್ತದೆ.

ಎಳೆತನದಿಂದ ಅಭ್ಯಾಸಮಾಡಿದ ಚಾಳಿ ದೊಡ್ಡವರಾದ ವಯೋಧರ್ಮಕ್ಕನುಗುಣವಾಗಿ, ಪತ್ರದ ವಸ್ತು ಬೇರೆಯಾಗುತ್ತದಲ್ಲದೆ ಸಂಪ್ರದಾಯ ಮಾತ್ರ ಬದಲಾಯಿಸುವುದಿಲ್ಲ. ಸಂಪ್ರದಾಯ ಶೂನ್ಯವಾದ ಪತ್ರ ಬರೆದರೆ ಬಹಳ ಬಂಡಾಗಿ ಕಾಣುತ್ತದೆ. ವಿಷಯ ನೇರವಾಗಿ ಮುಟ್ಟುವಂತೆ ಬರೆದುಬಿಡಬಹುದು. "ಕೊಡೋ ದುಡ್ಡು ಕೊಡೋ ಕೋದಂಡ ರಾಮಾ" ಎಂದು ನೇರವಾಗಿ ಬರೆಯಬಹುದು. ಆದರೆ ಹೀಗೆ ಮನಸ್ಸಿಗೆ ನೋವಾಗುವಂತೆ ಕಠೋರ ಸತ್ಯವನ್ನು ಸಂಪ್ರದಾಯ ಶೂನ್ಯಮಾಡಿ ಬರೆದರೆ ಬರುವ ಬಾಕಿಗೆ ಪಂಗನಾಮವೆ!! ಅದೇ ಬರುವ ಬಾಕಿಗೆ ಪತ್ರವನ್ನು ಶ್ರೀಕಾರದಿಂದ ಪ್ರಾರಂಭಿಸಿ ಸವಿನಯ ಸಂಪನ್ನ ಸಾಷ್ಟಾಂಗ ನಮಸ್ಕಾರ ಹಾಕಿ, ಉಭಯತರ ಕುಶಲೋಪರಿಯ ಸಾಂಪ್ರತ ನಡೆದು—ಹಣ ಕೊಡುವಾತನಿಗೆ ಅಕಸ್ಮಾತ್ ನೆಗಡಿಯಾಗಿದ್ದ ಪಕ್ಷದಲ್ಲಿ ಅವರ ಮೂಗಿನ ಪರಿಸ್ಥಿತಿ ವಿಚಾರಿಸಿ—ಅವರ ಮೂಗಿಗಾದ ಆಪತ್ತಿಗಾಗಿ ಪಶ್ಚಾತ್ತಾಪಪಟ್ಟು, ಏತನ್ಮಧ್ಯೆ ತಮಗೊದಗಿರುವ ಆರ್ಥಿಕ ಮುಗ್ಗಟ್ಟನ್ನು ಮುಂದು ಮಾಡಿ, ಅತಿ ವಿನಯದಿಂದ ಬೇಡಿ ಇತಿ ನಮಸ್ಕಾರ ಹಾಕಿದರೆ ಮರು ಟಪಾಲಿಗೇ ಮನಿಯಾರ್ಡರು ಬರುವುದು ಖಂಡಿತ. ಇದು ಸಂಪ್ರದಾಯ ಬದ್ಧವಾದ ಇತಿ ನಮಸ್ಕಾರದ ಫಲ. ಈಗೀಗ ಆಂಗ್ಲಭಾಷೆಯ ಪ್ರಭಾವದ ಪರಿಣಾಮವಾಗಿ ಹತ್ತಾರು ಸಂಪ್ರದಾಯಗಳು ತಪ್ಪಿಹೋಗಿವೆ. ಸಾಷ್ಟಾಂಗ ನಮಸ್ಕಾರವಿಲ್ಲದ ಪತ್ರ ಪ್ರೇತವೇ ಸರಿ.

ಈ ಸಂಪ್ರದಾಯಗಳು ಕ್ಷಯ ರೋಗದ ಹಾಗೆ ಒಮ್ಮೆ ಮೈಯಲ್ಲಿ ಸೇರಿಕೊಂಡಿತೆಂದರೆ ತೀರಿತು, ಘಟ ಉರುಳುವವರೆಗೂ ಹೋಗುವುದಿಲ್ಲ. ಶಾನುಭೋಗ ಸೋಮಣ್ಣೋರು ಮಹಾ ಕೋಪಿಷ್ಟರು—ಸಿಡಿಲಿನಂಥಹ ಮನುಷ್ಯ. ಅವರ ಆಳಿಕೆಗೆ ಸಿಕ್ಕ ರೈತರುಗಳು ಕುಯ್ಯೋ ಮರ್ರೋ, ಡೆಪ್ಯುಟಿ ಕಮಿಷನ್ನರೇ ಇವರಿಗೆ ತೃಣ ಸಮಾನ ಅಂದ ಮೇಲೆ ಪಾಪ ಶೇಕುದಾರರುಗಳ ಪಾಡೇನು?

ಆದರೂ ಇವರು ಲೇಖನಿ ಹಿಡಿದು, ಶಿಂಬಿಸುತ್ತಿ ಲೇಖನಿ ಹಿಡಿದು ಕಾಗದಾ ಹರಡಿಕೊಂಡು ಕೂತರೆಂದರೆ ತೀರಿತು—ಸರಸರನೆ ಸಂಪ್ರದಾಯಯುತವಾದ ಶಾನುಭೋಗ ಸಾಹಿತ್ಯ ಶುರುವಾಗಿಬಿಡುತ್ತಿತ್ತು. "ಹಜರತ್ ಮೆಹರ್ಬಾನ್ ಹುಜೂರ್ ಚಿತ್ರಕಲ್‌ದುರ್ಗ ಡಿಸ್ಟ್ರಿಕಟ್ಟು ಡೆಪ್ಯೂಟಿ ಕಮಿಷನರ್ ಖಾವಂದ ರವರ ಜನಾಬಿಗೆ—ಶಾನುಭೋಗ ಸೋಮಣ್ಣ ಗುಜರಾಯಿಸಿಕೊಂಡ ಅರ್ಜಿ—ಅದೇನೆಂದರೆ, "ಇದೇ ಖಿರ್ಧಿ ಜಮಿನು ಜಾಮಿನು ಬಾಬ್ತು ಬಿಕ್ಕಲಂ ಬರೆದ ಫಿದ್ವಿಯ ಬರಹವೇನೆಂದರೆ ......" ಇತ್ಯಾದಿ ಇತ್ಯಾದಿ ಸಂಪ್ರದಾಯ ಬದ್ಧವಾದ ಪತ್ರ ಬರೆದು ಬಿಡುತ್ತಿದ್ದರು. ಇದು ಅವರ ತೀರ್ಥರೂಪು ಅವರು ಕೇವಲ ಬಾಲಕರಿರುವಾಗಲೇ ತಿದ್ದಿ ತಿದ್ದಿ ಹಾಕಿಕೊಟ್ಟ ಸಂಪ್ರದಾಯದ ಫಲ.

ವಿದ್ಯಾರ್ಜನೆಗಾಗಿ ಹುಡುಗರು ಊರು ಬಿಟ್ಟು ನಗರ ಸೇರಿದರೆಂದರೆ, ಅವರ ಪತ್ರವ್ಯವಹಾರದ ಸಂಪ್ರದಾಯದ ವೈಖರಿಯೇ ಬದಲಾಯಿಸಿಬಿಡುತ್ತದೆ. ಅವರ ಲೇಖನಿ ಖಡ್ಗಕ್ಕಿಂತ ಭಾರಿಯಾಗಿಬಿಡುತ್ತದೆ. ಫೀಸು ಫೀಸು ಎಂದು ವರ್ಷದಲ್ಲಿ ೨೪ ತಿಂಗಳ ಫೀಸು ತರಿಸಿಕೊಂಡುಬಿಡುತ್ತಾರೆ. ಸೈಕಲ್ ಬೇಕಾದವ—ನಗರದ ಕಾರು ಬಸ್ಸು ಲಾರಿಗಳ ಯದ್ವಾತದ್ವತ್ವವನ್ನು ಹೃದಯಂಗಮವಾಗಿ ವರ್ಣಿಸಿ ಗೆಳೆಯನೊಬ್ಬ ಕಾಲೇಜಿಗೆ ಹೋಗುತ್ತಿದ್ದಾಗ ಜೀಪಿನ ಬಾಯಿಗೆ ಸಿಕ್ಕಿ ಇಹಲೋಕದಿಂದ ತೆರಳಿದ ವಿಷಯ ವಿವರಿಸಿ ಸೈಕಲ್ ತರಿಸಿಕೊಳ್ಳುವ ಸಂಪ್ರದಾಯ.

ವಾಚು ವಾಚು ಎಂದು ಪೇಚಾಡಿ, ತಂದೆಯನ್ನು ಕಾಡಿ, ಪತ್ರ ಬರೆದು ವಿಫಲರಾದ ಹುಡುಗರು—ಮಾವನಾದರೂ ವಾಚು ಕೊಡಿಸಲೆಂದು ಮದುವೆಯಾದ ಪೇಚುಗಳೂ ಉಂಟು. ತಿಂಗಳ ಮೊದಲ ವಾರದಲ್ಲಿ ತಂದೆಗೆ ಕಾಗದದ ಮೇಲೆ ಕಾಗದ. ಮನೆಮಂದಿಯ ಆರೋಗ್ಯವನ್ನು ವಿಚಾರಿಸಿದ್ದೂ ವಿಚಾರಿಸಿದ್ದೆ—ಸಾಷ್ಟಾಂಗ ನಮಸ್ಕಾರದ ಸುರಿಮಳೆ ಸುರಿಸಿ, ಹೆತ್ತವರ ಮನ ಒಲಿಸಿಕೊಂಡು ಬಂದ ಮನಿಯಾರ್ಡರ್ ರಸೀತಿಗೆ ಸಹಿ ಹಾಕಿದರೆಂದರೆ ತೀರಿತು ಮತ್ತೆ ಮನೆಯ ನೆನಪು ಬರುವುದು ಮರು ತಿಂಗಳು ಮೊದಲನೇ ತಾರೀಖೆ—ಇದು ವಿದ್ಯಾರ್ಥಿ ವೃಂದದ ಸಂಪ್ರದಾಯ.

ಇನ್ನು ವಿದ್ಯಾರ್ಜನೆಗಾಗಿ ಮಾವನನ್ನವಲಂಬಿಸಿದವರ ಸಂಪ್ರದಾಯವೇ ಒಂದು ತರಹ. ಬಾರಿಬಾರಿಗೆ ಮಡದಿಗೆ ಪತ್ರ ಬರೆದು ಆಮೂಲಕ ಮಾವನ ಕಿವಿಗೆ ತಮ್ಮ ಇಂಗಿತ ಮುಟ್ಟಿಸಿ ಚಕ್ಕು ತರಿಸಿಕೊಳ್ಳುವುದುಂಟು. ಮತ್ತೆ ಕೆಲವರು ತಮಗೆ ಬಂದ ಬಿಲ್ಲುಗಳನ್ನು ಮಾವನ ಹೆಸರಿಗೋ, ಕೈಹಿಡಿದಾಕೆಯ ಹೆಸರಿಗೋ ಬರೆಸಿ ಕೈಕೊಡವಿಕೊಂಡು ಬಿಡುವರು. ಮತ್ತೆ ಕೆಲವು ಧೀರರು "ಈ ಕಾಗದಾ ಕಂಡೊಡನೇ ಕಾಂಚಾಣ ಕಳಿಸಿ, ಇಲ್ಲದಿದ್ದರೆ ನಿಮ್ಮ ಮಗಳು

ನಿಮ್ಮ ಮನೆಯಲ್ಲೇ ಇರಲಿ” ಎಂದು ಬೆದರಿಸಿ ಬರೆಯುವ ಸಂಪ್ರದಾಯದವರು. ಪಾಪ ಹೆಣ್ಣು ಹೆತ್ತವರು ಮಗಳ ದುಃಖದ ಮುಖ ನೋಡಲಾರದೆ ಮನಿ ಯಾರ್ಡರ್ ಫಾರಂ ಭರ್ತಿ ಮಾಡುತ್ತಾರೆ.

ಹಾಗೂ ಹೀಗೂ ವಿದ್ಯಾಭ್ಯಾಸ ಮುಗಿಸಿದರೆಂದರೆ ಸರಿ, ಕೆಲಸದ ಬೇಟೆಗೆ ಪ್ರಾರಂಭ. ಇಲ್ಲೂ ಕೆಲವು ಕುಶಲಮತಿಗಳು ಸಂಪ್ರದಾಯವನ್ನು ಚಮತ್ಕಾರ ವಾಗಿ ಉಪಯೋಗಿಸಿ ತಮ್ಮ ಕೆಲಸ ಸಾಧಿಸಿಕೊಳ್ಳುತ್ತಾರೆ. ಕೆಲಸ ಕೊಡುವ ಧಣಿ ತನ್ನ ಸೋದರ ಮಾವನ ಮಗನ ಅತ್ತಿಗೆ ತಂಗಿಯ ಸಮೀಪ ಬಳಗವೆಂಧು ಅವರಿಗೂ ತನಗೂ ಬಾದರಾಯಣ ಸಂಬಂಧ ಕಲ್ಪಿಸಿಕೊಂಡು, ಹೇಗೋ ಆ ಆಫೀಸರಿಗೆ ಅಮ್‌ಟೆಕಾಯಿ ಉಪ್ಪಿನಕಾಯಿ ಎಂದರೆ ಮಹಾ ಮೋಹವೆಂದು ಕಂಡುಹಿಡಿದು ತನ್ನ ಸೋದರಮಾವನಿಗೆ ಭಾರಿ ಅಮ್‌ಟೆ ತೋಟವಿರುವುದೆಂದು ಆ ಕಾಯಿಗಳನ್ನು ರಸವತ್ತಾಗಿ ವಿವರಿಸಿ—ಜೇನು ತುಪ್ಪದಂತಹ ಕಾಗದಾ ಬರೆದು, ಕೆಲಸ ಗಿಟ್ಟಿಸಿಕೊಳ್ಳುವ ಸಂಪ್ರದಾಯದವರು.

ಕೆಲಸವೊಂದೇ ಸಾಕೆ—ಇನ್ನು ಬೇಯಿಸಿ ಹಾಕಲು, ಕಾಡಲು ಮಡದಿ ಬೇಡವೆ!—ಹುಡುಗರಿಗೆ ಹುಡುಗಿಯರಿಗೆ ವಯಸ್ಸಾಗುತ್ತಾ ಆಗುತ್ತಾ ಯೌವ ನದ ಹೊಸಲಿಗೆ ಕಾಲಿಟ್ಟರೆಂದರೆ ಪ್ರಣಯ ಪತ್ರಗಳನ್ನು ಬರೆಯುವ ಸಂಪ್ರ ದಾಯ ಪ್ರಾರಂಭವಾಗುತ್ತದೆ. ಈ ಪ್ರಣಯ ಪತ್ರಗಳ ಜಾಡೇ ಬೇರೆ. ಅವು ಗಳ ಪ್ರಪಂಚವೇ ಬೇರೆ. ಇವು ಸಾಮಾನ್ಯವಾಗಿ ಜೇನು, ಹಾಲು—ಬೆಳ ದಿಂಗಳು ಪೂರ್ಣಚಂದ್ರ, ಜಲಪಾತ, ಪ್ರಕೃತಿ ಸೌಂದರ್ಯ ಮುಂತಾದುವು ಹೇರಳವಾಗಿರುವ ಕಲ್ಪನಾ ಪ್ರಪಂಚಕ್ಕೆ ಸೇರಿರುತ್ತವಾದ್ದರಿಂದ ಇವುಗಳ ಸಂಪ್ರ ದಾಯ ಹೀಗೇ ಎಂದು ಹೇಳುವುದು ಕಠಿಣ. ಶಕುಂತಳೆ ದುಷ್ಯಂತನಿಗೂ— ದಮಯಂತಿ ನಳಮಹಾರಾಜನಿಗೂ ಬರೆದ ಪ್ರಣಯ ಪತ್ರಗಳಿಂದ ಈ ಸಂಪ್ರ ದಾಯ ಬಹಳ ಹಳೆಯ ಪುರಾಣ ಪ್ರಸಿದ್ಧವಾದುದೆಂದು ಹೇಳಬಹುದು.

ಪ್ರಣಯಪತ್ರ ನಡೆದು ಮದುವೆಯಾಗುವುದೂ, ಮದುವೆಯಾಗಿ ಪ್ರಣಯ ಪತ್ರ ವ್ಯವಹಾರ ನಡೆಯುವುದೂ ಎಂದು ಎರಡು ಸಂಪ್ರದಾಯ ಉಂಟು. ಒಂದೊಂದು ಸಲ ಪತ್ರವ್ಯವಹಾರ ನಡೆದೂ ಮದುವೆ ನಿಂತುಹೋಗುವುದುಂಟು. ಒಂದು ಬಾರಿ ಹೀಗೇ ಆಯಿತು. ಒಬ್ಬ ಎದುರು ಮನೆ ಮೋಹಿನಿಯನ್ನು ಮೋಹಿಸಿ ಪ್ರಣಯ ಪತ್ರ ಬರೆದ. ಮರುತ್ತರವೂ ಬಂತು. ಪ್ರಿಯೆ—ಪ್ರಿಯ, ಡಾರ್ಲಿಂಗ್—ಡಾರ್ಲಿಂಗಿ ಎಂದು ನಿರರ್ಗಳವಾಗಿ ಕಾಗದಗಳು ಓಡಾಡಿ—ಕಡೆಗೆ ಮೋಹಿನಿ ತಂದೆಯನ್ನು ಕೇಳಿ ಮದುವೆಯಾಗುವುದೆಂದು ತೀರ್ಮಾನವಾಯಿತು. ಭಾವಿ ಮಾವನವರ ಉತ್ತರಕ್ಕಾಗಿ ಈ ಪ್ರೇಮಿ ಕಾದಿದ್ದ. ಮೋಹಿನಿ ಬಂದವಳು ತಲೆ ತಗ್ಗಿಸಿ ಹೇಳಿದಳು—'ತಂದೆಯವರನ್ನ ಕೇಳಿದೆ, ಅವರು ಹಾಗೇ ಮಾಡಮ್ಮ

—ನಾನೂ ಒಳ್ಳೇ ವರನನ್ನೇ ಹುಡುಕುತ್ತಿದ್ದೇನೆ—ಎಲ್ಲೂ ಒಳ್ಳೇ ವರ ಸಿಗದಿದ್ದರೆ ಅವನನ್ನೇ ಮಾಡ್ಕೊವಂತೆ—ಎಂದು ಹೇಳಿದರು. ನನಗೂ ಅದೇ ಸರೀಂತ ತೋರುತ್ತೆ" ಎಂದು. ಆ ಹುಡುಗ ಹಣೆ ಹಣೆ ಬಡಿದುಕೊಂಡು ಓಡಿಹೋದ.

ಕೆಲವು ಸಲ ಸಂಪ್ರದಾಯಸ್ಥರ ಆವರಣದಲ್ಲಿ ಬೆಳೆದ ಹುಡುಗಿಯರು ನಾಚಿಕೆಯ ದೆಸೆಯಿಂದಾಗಿ ತಮ್ಮ ಪ್ರಿಯತಮರಿಗೆ ಪತ್ರ ಬರೆಯದೆ ನಿರಾಶೆಗೊಳಿಸುತ್ತಾರೆ. ನಮ್ಮ ಭೀಮುನ ವಿಷಯದಲ್ಲಿ ಹೀಗೇ ಆಯಿತು. ಅವನಿಗೆ ಪ್ರಣಯಪತ್ರ ಬರೆಯುವ ಹುಚ್ಚು—ಆ ಹೆಂಡತಿ ಬರೆಯಲೊಳ್ಳಲು. ಭೀಮುನ ತಂದೆ ಹೊನ್ನು ಮುಖ್ಯ, ಹೆಣ್ಣು ಕಟ್ಟಿಕೊಂಡೇನು? ಎನ್ನುವ ಜಾತಿ. ವರದಕ್ಷಿಣೆಗೆ ಕೈಯೊಡ್ಡಿ ಮಗನಿಗೆ ಈ ಹುಬ್ಬಳ್ಳಿಯ ಹಿಡಿಂಬಿಯನ್ನು ತಲೆಗೆ ಕಟ್ಟಿದ್ದರು. ಕೂಡಿದ ಮೇಲೆ ಕೋಡಗನಿಗೇ ಪ್ರಣಯಪತ್ರ ಬರೆಯ ತೊಡಗಿದ ನಮ್ಮ ಭೀಮು. ಘಮಘಮಿಸುವ ಕಾಗದದಲ್ಲಿ ಮಾರುದ್ದದ ಪ್ರಣಯಪತ್ರ ಬರೆದ. ಕಾದಾ ಕಾದಾ ತಿಂಗಳಾದರೂ ಉತ್ತರ ಬರಲಿಲ್ಲ. ಆ ಹುಡುಗಿಗೆ ಗಂಡನ ಹೆಸರು ಕೇಳಿದರೆ ನಾಚಿಕೆ ಇನ್ನು ಪತ್ರವೇನು ಬರೆದೀತು? ಭೀಮು ರೇಗಿ ಅವರ ಮಾವನಿಗೆ ಒಂದು ಕಾಗದ ಬರೆದ ಮೇಲೆ ಕಡೆಗೂ ಒಂದು ಪತ್ರ ಬಂತು. ಅವತ್ತು ಅವನ ಹಿಗ್ಗು ಹೇಳತೀರದು. ಒಡೆದು ಓದಿದ "........ಪತಿ ದೇವರ ಪಾದಗಳಿಗೆ ಗೌರಿಯ ಶರಣಾರ್ತಿಗಳು—ಇಲ್ಲಿ ಮನಿವಳಗ ಭಾಳ ತ್ರಾಸ ಆದದ್ದರಿಂದ ನಿಮಗ ಬರೀಲಿಲ್ಲ—ಏನೂ ತಿಳಿಬ್ಯಾಡ್ರಿ—ನೀವು ಹಿಂಗ ಸಿಟ್ಟಿಗೆದ್ದರೆ ಹ್ಯಾಂಗ? ತಂಗಿ ಕಾಂತಮತಿ ಇನ್ನೂ ಇಲ್ಲೇ ಇರಾಕಿ ಇದ್ದಾಳ! ಇಲ್ಲಿ ಚಿಟಚಿಟ ಮಳಿ ಹಿಡಿದದ, ನೀರು ಮಳಿ ಅಲ್ಲ—ನಮ್ಮ ಅಬಚಿ ಕೂಸು ತೀರಿಕೊಂಡ್ತು........ಮತ್ತೇನು ಬರೀಲಿ ತಿಳಿದವರಿಗೆ—ಇತಿ ನಿಮ್ಮ ಸತಿ ಗೌರಿ" ಎಂದು ಮುಕ್ತಾಯವಾಗಿತ್ತು. ಇದನ್ನೋದಿದ ಭೀಮು ಹಣೆ ಹಣೆ ಬಡೆದುಕೊಂಡ. ರೇಗಿ ರೇಗಿ ಬಿದ್ದ. "ಅವರ ಅಬಚಿ ಕೂಸು ಸಾಯುವ ಬದಲು ಇವಳೇ ನೆಗೆದು ಬೀಳಬಾರದಾಗಿತ್ತೆ........" ಎಂದು ಕೂಗಾಡಿದ. ಹೀಗೆ ಜೀವನದಲ್ಲಿ ರಸವತ್ತಾದ ಪ್ರಣಯಪತ್ರ ವ್ಯವಹಾರ ನಡೆಸಬೇಕೆಂಬ ಹಂಬಲದಿಂದ ಇದ್ದಾಗ ಸಂಪ್ರದಾಯ ಅಡ್ಡ ಬಂದು ಪೇಚಾಡುವ ಸಂದರ್ಭ ಒದಗುತ್ತದೆ.

ಪ್ರಣಯ ಪತ್ರಗಳ ಸಂಭೋದನೆಯ ಸಂಪ್ರದಾಯ ರಾಶಿ ರಾಶಿಯಾಗಿ ಬೆಳೆದು ಬಂದಿದೆ. ಪ್ರಿಯೆ—ಮೋಹನಾಂಗಿ—ಎನ್ನರಸಿ—ಚೆನ್ನರಸಿ—ಮಾವನ ಮಗಳೇ—ಮುತ್ತಿನ ಚಂಡೇ—ಮಲ್ಲಿಗೆ ಅರಳೇ—ಸುಂದರೀ—ರಾಣಿ ಸಾಹೇಬ—ಇತ್ಯಾದಿ ಇತ್ಯಾದಿ ಹೆಣ್ಣಿಗೂ.— ಎನ್ನರಸ—ಚೆನ್ನರಸ—ಮಾವನ ಮಗನೆ——ಪ್ರಾಣಪ್ರಿಯ—ಮದನಾಂಗ—ಸುಂದರ—ಪಂಚ ಪ್ರಾಣ—ಮುಖ್ಯಪ್ರಾಣ, ಎಂದು ಗಂಡಿಗೂ ಕರೆಯುವ ಸಂಪ್ರದಾಯ.

ಒಂದು ಸಾರಿ ಒಬ್ಬ ರಸಿಕ ತನ್ನ ಮಡದಿಗೆ "ಎನ್ನ ಕಣ್ಮಣಿಯೇ" ಎಂದು ಬರೆಯುವ ಬದಲು, "ಎನ್ನ ಕರೇಮಣಿಯೇ" ಎಂದು ಬರೆದುಬಿಟ್ಟನಂತೆ! ತೌರೂರಿಗೆ ಹೋದ ಆಕೆಯನ್ನು ಮರಳಿ ಕರೆತರಬೇಕಾದರೆ ಅಶ್ವಮೇಧ ಪ್ರಯತ್ನವಾಯಿತು.

ಮತ್ತೊಬ್ಬ ತರುಣ ಪ್ರೇಮಿ ಹೀಗೆ ಬರೆದನಂತೆ ತನ್ನ ಮಾವನಿಗೆ, "ತಾಳಿ ಬಿಗಿಯಲು ನಿಮ್ಮ ಕುವರಿಯ ಕೊರಳು ದೊರಕಿಸಿಕೊಂಡ ಈ ಕರಗಳು ಎಷ್ಟು ಕೃತಾರ್ಥವಾದವೊ" ಎಂದು. ಆ ಮಾವ ಅಳಿಯನಿಗೆ ಮರುತ್ತರದಲ್ಲಿ "ಕುವರಿಯ ಕೈಹಿಡಿದ ಆ ಕೃತಾರ್ಥ ಕರಗಳು ನನ್ನ ಹಣಜೇಬಿಗೆ ಬೀಳದಿರಲಿ" ಎಂದು ಬರೆದನಂತೆ.

ಗಂಡಹೆಂಡಿರು ಒಂದೇ ಊರಿನಲ್ಲಿದ್ದರೂ ಪ್ರಣಯಪತ್ರ ಬರೆಯುವ ಸಂಪ್ರದಾಯ ಕೆಲವರದು. ಒಬ್ಬ ಪ್ರೇಮಿ ಹೀಗೆ ಬರೆದ.—"ಹೇ! ಮದನಾಂಗ ಮೋಹಿನಿ ನಿನ್ನ ಎಂದು ನೋಡೇನು! ನಿನ್ನ ತಾವರೆಯ ಮುಖ (ಬರೀ ಮಡುಮೆಯಿಂದ ತುಂಬಿದ್ದರೂ) ನೋಡಲು- ಸಪ್ತಸಮುದ್ರ ಹಾರಿ ಬಂದೇನು. ರಾಕ್ಷಸರೊಡನೆ ಹೋರಾಡಿ ನಿನ್ನ ಪ್ರೇಮದ ದರ್ಶನ ಪಡೆದೇನು...." ಮುಂತಾಗಿ ಬರೆದು ಕಡೆಗೆ "ಇವತ್ತು ಸಂಜೆ ಮಳೆ ಬರದಿದ್ದರೆ—ನಿಮ್ಮ ಮನೆಕಡೆ ಬರೋಣಾಂತ ಮಾಡಿದ್ದೇನೆ" ಎಂದು ಬರೆದಿರುತ್ತಾನೆ. ಕೇವಲ ಮಳೆಗೆ ಹೆದರುವ ಈ ಹುಂಜ ನಿಜವಾಗಿ ಸಪ್ತಸಮುದ್ರ ಹಾರುತ್ತಾನೆಯೆ? ಇದು ಬರೀ ಪತ್ರದಲ್ಲಿಯಲ್ಲವೆ? ಹೀಗೆ ಪ್ರಣಯಪತ್ರಗಳು ತನ್ನದೇ ಆದ ಸಂಪ್ರದಾಯಗಳನ್ನು ಹಾಕಿಕೊಂಡಿವೆ.

ಪ್ರಣಯದ ಸ್ವರೂಪ ವಿಕಾರವಾಗಿ ಗಂಡಹೆಂಡಿರಲ್ಲಿ ಮನಸ್ತಾಪ ತಲೆದೋರಿ ಅನೇಕವೇಳೆ ಹೆಂಡಂದಿರು ಮುನಿಸಿಕೊಂಡು ತೌರೂರು ಸೇರುವುದು ಸಂಪ್ರದಾಯ. ಆಗಿನ ಸಮಯದಲ್ಲಿ ಜಂಭ ಮಾಡಿ ಮಾತು ಉಚಾಯಿಸಿ ಆಡಿದ ಈ ಗಂಡಂದಿರ ಪಾಡು ನಾಯಿಪಾಡು. ಅನೇಕವೇಳೆ ಈ ಸಂದರ್ಭಗಳಲ್ಲಿ ಗಂಡಂದಿರು "ಇಂತಿ ನಮಸ್ಕಾರಗಳು" ಎಂದೂ ಬರೆದುಬಿಡುವ ಸಂಪ್ರದಾಯ. ಮತ್ತೆ ಕೆಲವರು ಎರಡನೆ ಲಗ್ನದ ಬೆದರಿಕೆ ಹಾಕುತ್ತಾರೆ. ಇದು ಸಾಧ್ಯವಿಲ್ಲವೆಂದು ಗಂಡಹೆಂಡಿರಿಬ್ಬರಿಗೂ ಗೊತ್ತು. ಎಷ್ಟೆ ಆಗಲಿ ಗಂಡಹೆಂಡಿರ ಜಗಳ.

ಹೆಣ್ಣು ಹೆತ್ತವರು ಗಂಡಿಗಾಗಿ ಅಲೆದಾಡುವಾಗ ಬರೆಯುವ ಸಂಪ್ರದಾಯವೇ ಒಂದು ತರಹ. "....ನಿಮ್ಮ ಮನೆತನ—ನಿಮ್ಮ ಅಂತಸ್ತು—ನಮ್ಮ

ಹೆಣ್ಣು ಜೋಡೀ ಗ್ರಾಮ—ನಮ್ಮ ಪುಣ್ಯ, ದೇವರೆ ದಯೆ—ಯತ್ರಗುರು ತತ್ರ ಶಿಷ್ಯ…" ಎಂದು ಬೆಣ್ಣೆಯಲ್ಲಿನ ಕೂದಲು ತೆಗೆದ ಬರಹ ಬರೆದುಬಿಡುತ್ತಾರೆ. ಮಾಸ್ತರು ಮಾಧವರಾಯರ ಮಗನಿಗೆ ಹೆಣ್ಣು ಕೊಡಲು ರಾಯರೊಬ್ಬರು ಪತ್ರ ಬರೆದು ಮೂಗಿಗೆ ತುಪ್ಪ ಹಚ್ಚಿದರು. ಏನೋ ಬ್ರಹ್ಮ ಬರೆದಿರಲಿಲ್ಲ, ವ್ಯಾಪಾರ ಕುದುರಲಿಲ್ಲ ಎಂದುಕೊಳ್ಳದೆ, ಲಾಯರಿಕೆ ತೋರಿಸಿ ಆ ಮಾಸ್ತರನ್ನು ಸನ್ಯಾಸಿಗೆ ಹೋಲಿಸಿ ಬರೆದು ಬೈದು ತೀಟೆ ತೀರಿಸಿಕೊಂಡರು. ಅದರ ತಿರುಳು ಹೀಗಿತ್ತು. "ಶ್ರೀಮತ್ಪರಮ ಹಂಸ — ಪರಿವ್ರಾಜಿಕಾಚಾರ್ಯ — ಅಷ್ಟಾಂಗ ಯೋಗ ಪ್ರವೃತ್ತ ಶ್ರೀ ಶ್ರೀ ಶ್ರೀ ಮಾಸ್ತರ ಮಾಧವರಾಯರಿಗೆ" ಎಂದು ಪ್ರಾರಂಭಿಸಿದ್ದರು. ಅದರ ಅಂತರಾರ್ಥ—ಮಾಸ್ತರ ರಕ್ತವಿಲ್ಲದ ಅನಿಮಿಯದ ವೈಯ್ಯನ್ನು ಹಂಸಕ್ಕೂ ಊರಿಂದ ಊರಿಗೆ ಸದಾ ವರ್ಗವಾಗುವ ಪ್ರಯುಕ್ತ ಪರಿವ್ರಾಜಿಕಾಚಾರ್ಯರೆಂದೂ, ಮಾಸ್ತರ ಕಾಷ್ಠವ್ಯಸನ—ವಸನ ವ್ಯಸನಗಳೇ ಇತ್ಯಾದಿ ತಾಪತ್ರಯಗಳನ್ನು ಅಷ್ಟಾಂಗಯೋಗಗಳಿಗೂ ಹೋಲಿಸಿ ಹಿಯ್ಯಾಳಿಸುವುದಾಗಿತ್ತು. ಮಾಸ್ತರು "ಅವರ ಸಂಪ್ರದಾಯವೇ ಹಾಗೆ" ಎಂದು ಸಂಪ್ರದಾಯಯುತವಾಗಿ ಮಾತಾಡಿ ಸಮಾಧಾನ ಹೊಂದಿದರು.

ಮಗಳ ಅತ್ತೆ ತೀರಿಕೊಂಡಾಗ—ಬೀಗಿತಿಯ ಮರಣದ ಸುದ್ದಿಕೇಳಿ ಕಣ್ಣೀರ ಕಾಲುವೆ ಹರಿಸಿ—"ತಾಯಿಗಿಂತ ಹೆಚ್ಚಾಗಿದ್ದವರು ತೀರಿಕೊಂಡರೇ" ಎಂದು ಮರುಗಿ "ಇನ್ಯಾರು ನನ್ನ ಮಗಳಿಗೆ ದಿಕ್ಕು" ಎಂದು ಪೇಚಾಡಿ ಬೀಗಿತ್ತಿಯ ಮರಣದಿಂದಾದ ದುಃಖ ಪ್ರದರ್ಶನಮಾಡಿ ಬರೆದ ಪತ್ರ ಕೇವಲ ಸಂಪ್ರದಾಯಕ್ಕಾಗಿ ಅಲ್ಲದೆ, ನಿಜವಾಗಿ ಅವರಿಗೆ ಹಾಗೆನಿಸುತ್ತದೆಯೆ? "ಕಾಡಿಸುವ ಅತ್ತೆ ಎಂಬ ಕುತ್ತ ಇಲ್ಲವಾದುದು ಮಗಳ ಜಾತಕದ ಪುಣ್ಯ" ಎಂದು ಅವರು ಅಂದುಕೊಳ್ಳುವುದಿಲ್ಲವೆ? ಇದೆಲ್ಲಾ ಸಂಪ್ರದಾಯದ ಶರಣಾರ್ತಿ ಅಷ್ಟೆ.

ಹೀಗೆ ಮನುಷ್ಯನ ಜೀವನದಲ್ಲಿ ಬಾಲ್ಯದಿಂದ ವೃದ್ಧಾಪ್ಯದ ತನಕ ಈ ಸಂಪ್ರದಾಯಗಳು ಹಾಸುಹೊಕ್ಕಾಗಿ ಸೇರಿಕೊಂಡುಬಿಟ್ಟಿವೆ. ಪತ್ರವ್ಯವಹಾರದಲ್ಲಂತು ಈ ಸಂಪ್ರದಾಯಗಳು ತೊರೆಯಲಾಗದ ಅಂಶವಾಗಿಬಿಟ್ಟಿದೆ.

ಇನ್ನೇನು ಬರೆಯಲಿ? ಅದಾಗಿ ಉಭಯಕುಶಲೋಪರಿ ಸಾಂಪ್ರತ. ಇನ್ನೇನೂ ವಿಶೇಷವಿಲ್ಲ.

ಇತಿ ನಮಸ್ಕಾರಗಳು,

**ದಾಶರಥಿ ದೀಕ್ಷಿತ್.**

# ಮರದ ಮೂಗಿನ ಮನುಷ್ಯ

ಆಶ್ಚರ್ಯ! ಅಸಂಭವ! ಅಂತ ನೀವು ಹೇಳುತ್ತೀರೋ ಏನೋ? ಅವನ ಕತೆಯನ್ನೇ ವಿವರವಾಗಿ ಹೇಳುತ್ತೇನೆ . ಆದರೆ, ಪೀಠಿಕಾ ರೂಪದಲ್ಲಿ ಒಂದು ಪದ್ಯದ ತುಂಡಿರಲಿ, ಮೊದಲು .. .. ಪದ್ಯಂ ಹೃದ್ಯಂ ಮದ್ಯಸಮಾನಂ ... ಅಂತ ಯಾರೋ ಹೇಳಿಲ್ಲವೆ?

ಗಿಡಗಿಡದಲಿ ನವಹಿಮಮಣಿ
ಕೊಂಬೆ ರೆಂಬೆಗೆ ಕಂಬಳಿ ಹುಳ
ಗುಡುಗುಡುಗುತ ಸಿಡಿಮಿಡಿಯುತ

ಯಾಕೊ! ಸ್ಫೂರ್ತಿ ಸಾಲದು! ಯಥಾ ಶಕ್ತಿ ಕಾವ್ಯಾರಾಧನೆ, ಅಷ್ಟೇ ಸಾಕು, ಎನಿಸುತ್ತದೆ. ಈಗ. ಆ ಮರದ ಮೂಗಿನ ಮನುಷ್ಯ ವಿಷಯ ತಿಳಿದು ಕೊಳ್ಳೋಣ. ನಮ್ಮೂರಿಂದ ಎಂಟು ಮೈಲಿ .. ... ಅಂದ ಹಾಗೆ, ಕಂಬಳಿ ಹುಳದ ಜ್ಞಾಪಕ ನನಗೆ ಹೇಗೆ ಬಂತು ಗೊತ್ತೆ? ಅಯ್ಯೋ! ಅಯ್ಯೋ! ಮನೆ ಹಿಂದೆ ನುಗ್ಗೆ ಮರದಲ್ಲಿ ಬುಡದಿಂದ ತುದಿವರೆಗೂ ಗಂಟುಗಂಟಾಗಿ ಅಂಟಿಕೊಂಡಿತ್ತು ದಟ್ಟವಾದ ದಪ್ಪ ಹುಳುಗಳು.. .. ಹೊಗೆ ಹಾಕಿದರೂ ಹೋಗಲೊಲ್ಲದು........ಲೊಲ್ಲವು. ಕಡೆಗೆ, ಆಚೆಬೀದಿ ಅಂದಾನಪ್ಪ ಬಂದು ಕೊಡಲಿಯಿಂದ ಕಡಿದು ಕಡಿದು — ಹುಳುಗಳನ್ನೆಲ್ಲ — ಮರವನ್ನೇ ಬೀಳಿಸಿ ಎಳೆದುಕೊಂಡು, ಕೆರೆ ಅಂಗಳದಲ್ಲಿ ಬೆಂಕಿ ಹಚ್ಚಿದ. ಪಾಪ! ನಾಲ್ಕಾಣೆ ಕೊಡೋಕೆ ಹೋದೆ, ಅಂದಾನಪ್ಪನಿಗೆ... . ಇರಲಿ ...... ಇರಿಸಿಕೊ........ಕಾಫಿ ದೋಸೆಗೆ... ....ಓ! ಶಾಂತಂ ಪಾಪಂ! ದೋಸೆ ಮಾಡಕೂಡದಲ್ಲಾ... .... ಏನು? ಹೌದು, ಹೌದು... ... ಮರದ ಮೂಗನ್ನು ಅವನು ಹೇಗೆ ಹೊತ್ತು ಕೊಂಡು ತಿರುಗಾಡಿದ ಯಾರಿಗೂ ಪತ್ತೆ ಆಗದ ಹಾಗೆ ಅಂತೀರಾ?

ಇನ್ನೇನು? ಅಲ್ಲಿಗೇ ಬಂದೆ, ಅನ್ನಿ! ದೋಸೆ ಅಂದಾಗ, ಗಮನ ಎಲ್ಲೋ ಹೋಯಿತು ಅಷ್ಟೆ. ಅಲ್ಲಾ ಸ್ವಾಮಿ, ಹಿಂದೆ ಇಡ್ಲಿ ದೋಸೆ ಅಂತ ಮಾರು ತ್ತಿದ್ದರಲ್ಲಾ ನಮ್ಮ ಹೋಟಲುಗಳಲ್ಲಿ, ಅವು ಸಾಕ್ಷಾತ್ ಇಡ್ಲಿ ದೋಸೆಯಾ ಗಿದ್ದುವೆ? ಖರ್ಚಾಗದೆ ಉಳಿದಿದ್ದ ವಡೆ, ಬೋಂಡ, ಬೂಂದಿ ಇತ್ಯಾದಿಗೆಲ್ಲ ಆಧಾರಭೂತವಾಗಿದ್ದ ಮಸಾಲೆ ದೋಸೇನ........ಓ! ಗಗನ ಕುಸುಮ, ಉದರ

ಗೋಪುರ ತೋರಿಸಿ ಚಿತ್ರಹಿಂಸೆ ಮಾಡಬಾರದು, ಸರಿ ... .. ಒಪ್ಪಿದೆ........ಮರದ ಮೂಗಿಟ್ಟುಕೊಂಡು ಆ ಮನುಷ್ಯ ತಿರುಗಾಡುತ್ತಿದ್ದರೆ .. ....ನೋಡಿದಿರಾ! ಕೈಯಲ್ಲೇನೋ ಪಾರ್ಸಲ್ ಸಹಿತವಾಗಿ ಆ ಹುಡುಗ ಆ ಹೋಟಲಿಂದ ಸರಕ್ಕಂತ ಓಡಿದ, ನೋಡಿದಿರಾ! ಅದರೊಳಗೇನು, ಗೊತ್ತೆ? ಬೇಡ! ನಿಮ್ಮ ಬಾಯಲ್ಲಿ ನೀರೂರಿಸಿ........ಇಲ್ಲ, ಸಾರ್! ನಿಮ್ಮ ಹಸಿದ ಕಣ್ಣಿಗೆ ಹಾಗೆ ಕಾಣಿಸಿತು, ಅಷ್ಟೇನೆ. ಹುಡುಗನೂ ಇಲ್ಲ, ಪಾರ್ಸಲೂ ಇಲ್ಲ, ಓಡಲೂ ಇಲ್ಲ... . ಬರೀ ಮಾಯೆ.... . ಅಭ್ಯಾಸ . . ಭ್ರಾಂತು . ....ಏನು? ಅಲ್ಲಾ ಕಣ್ರಿ! ಮದುವೆ ಚಪ್ಪರದಲ್ಲಿ ಹೋಮ ಧೂಮ ಎದ್ದು ಗಲಾಟೆ ನಡುವೆ... ....ಉಂ........ಆ ಮಾತು ಯಾಕೀಗ... ....ಮರದ ಮೂಗಿನ ಮನುಷ್ಯ! ತಾಳ್ರಪ್ಪ! ತಾಳ್ರಪ್ಪ! ನಾಲ್ಕನೆ ಪಂಕ್ತಿ ಇಲ್ಲದೆ ಆ ಪದ್ಯ ಕುಂಟುತ್ತಾ ನಿಲ್ಲೋದು ನ್ಯಾಯವೆ? ಅದನ್ನೊಂದಿಷ್ಟು ಪೂರ್ತಿಮಾಡಿ........

ಕಡು ಕೊಡಲಿಯು ಹೊಡೆ ಹೊಡೆದನು

ಅಂತು, ಇಂತು, ಕುಂತಿಗೆ ಮೂರು ಮಕ್ಕಳಾಯಿತು ಅನ್ನುವ ಹಾಗೆ, ಪಂಕ್ತಿ ಭೇದವಿಲ್ಲದೆ, ಕವನ ಕಂಪ್ಲೀಟಾಯಿತಲ್ಲಾ; ಈಗಿನ ರೇಷನ್ ಕಾಲದಲ್ಲಿ ಕವಿತೆಗೆ ಬರ. ಸಕ್ಕರೆ ಸಿಕ್ಕುವುದೇ ತಾಪತ್ರಯವಾದರೆ, ಕವಿತೆಯಲ್ಲಿ ಕಹಿಯಿಲ್ಲದೆ ಏನಿದ್ದೀತು? ಕಾವಿಲ್ಲದೆ ಕವಿ ಇಲ್ಲ. ಆದರೆ, ಸೌದೆ ಇಲ್ಲದೆ, ಕಾವು ಹೇಗೆ? ಹಸಿ ಸೌದೆಯಿಂದ ಹೊಗೆ ಹೇಗೋ ಹಾಗೆಯೆ, ಹಸಿದ ಹೊಟ್ಟೆಯಿಂದ ಹಗೆ! ........ಛೆ! ಆ ನಾಲ್ಕು ಪಂಕ್ತಿಗಳನ್ನೂ ವೆ, ಈಗ ಒಳ್ಳೆ ಸ್ಫೂರ್ತಿ ಬಂದಿರುವ ಈಗ ಬರೆದಿದ್ದರೆ........ಪಿಂತನು ಚಿಂತಿಸಿ ಬಂತೇನು?........ಹಾ! ಏನು? ಅಷ್ಟು ಕೂಗಬೇಡ್ರಪ್ಪ! ಓ! ಹೌದು! ಮರದ ಮೂಗಿನ ಮನುಷ್ಯ! ಮನುಷ್ಯ ಅನ್ನಬೇಡಿ, ಅವರನ್ನು. ತುಂಬಾ ಗಣ್ಯರು, ನಾಣ್ಯದವರು........ನಾಣ್ಯ ಅಂದಾಗ ನೆನಪು ಬಂದು; ಆಯಿತು, ಇನ್ನೆಲ್ಲಿಯ ಮನಶ್ಶಾಂತಿ! ಹತ್ತೂವರೆ ಗಂಟೆಗೆ ಬಾಗಿಲಲ್ಲಿ ಹಾಜರು ಆಸಾಮಿ! ಕೊಟ್ಟು ತೀರಿಸದೆ ಹೋದರೆ, ಅವನೇ ತೀರಿಸಿಬಿಡುತ್ತಾನಂತೆ........ಹೇಳಿದ ನಿನ್ನೆ........ತಾಳ್ರಿ ಸ್ವಾಮಿ! ಕೂಗಬೇಡ್ರಿ! ನನ್ನ ಕೈಯಲ್ಲಿ ಸಾಧ್ಯವಿಲ್ಲ. ಆತ ಹತ್ತೂವರೆಗೆ ಬಂದೇ ಬರುತ್ತಾನೆ. ಅವನನ್ನು ನೆನೆದರೆ,—ಮರೆಯುವುದು ಸಾಧ್ಯವೆ....... ನಾಲಿಗೆಯೇ ಏಳುವುದಿಲ್ಲ ........ಲೇಖನಿ ಹಿಡಿಯುವುದೇ ಕಷ್ಟ.

—ಗೋವಿಂದು.

# ಬಸ್ಸು ತಪ್ಪಿದವರು

ಮೂರು ಗಂಟೆ ಕಾಲ ಕೈ ಮರದ ಕೆಳಗೆ ಪಿ.ಪಿ.ಎಸ್. ಬಸ್ಸಿಗಾಗಿ ಕಾದು ಕಾದು ಕುಳಿತಿದ್ದೆ, ಬಲಗಡೇನೇ ಕತ್ತು ತಿರುಗಿಸಿಕೊಂಡು. ಪಿ. ಪಿ. ಎಸ್. ಬಸ್ಸು—ಪೆಟ್ರೋಲಿನದು, ನೀಲಿ ಬಣ್ಣದ್ದು, ಹೊಸಾಹೊಸದು ನಿಜ. ಆದರೆ, ಹಾಳು, ಬಂದರೆ ತಾನೆ, ನಮಗೀ ವಿಷಯ ಎಲ್ಲ ನೆನಪಿಗೆ ಬರೋದು? ಒಂದು ಒಂದೂವರೆ ಗಂಟೆ ಕಾಯುವುದರೊಳಗೆ ನನ್ನ ಕತ್ತು ಎಡಕ್ಕೆ ತಿರುಗಲೇ ಒಲ್ಲದು; ಮೂಗಿನ ತುದಿ ಎಲ್ಲ ಕೋಪದಿಂದ ಕೆಂಚಗಾಯಿತು; ಹೊಟ್ಟೆಯಲ್ಲಿ ತಾಳ ಪ್ರಾರಂಭವಾಯಿತು; ಕಿವಿಯಲ್ಲಿ ಗುಂ ಗುಂ ಗಾನ ಷುರು ಆಯಿತು. ನಾಲಗೆ ಹರಿತವಾಯಿತು ಪಿ. ಪಿ. ಎಸ್ಸನ್ನು ಬಾಯಿಗೆ ಬಂದ ಹಾಗೆ ಬೈಯ್ಯುವುದಕ್ಕೆ ಮೊದಲುಮಾಡಿದೆ. ಒಡಕಲು ಡಬ್ಬ, ಕೊಲೆಪಾತಕ, ಬೆಂಕಿ ಬಿದ್ದು ಹೋಗ, ಚಕ್ರ ಕಿತ್ತುಬರ, ಪೆಟ್ರೋಲ್ ಇಂಗಿಹೋಗ, ಲೈಸೆನ್ಸ್ ಹರಿದು ಹೋಗ.. ಎಂದೆಲ್ಲ ಕೂಗಿದೆ. ಅಚ್ಚ ಕನ್ನಡದಲ್ಲೇ ಅದರ ತಾತ ಮುತ್ತಾತಂದಿರನ್ನು ಬೈದೆ. ಎದ್ದು ನಿಂತು, ಕೈಲಿದ್ದ ಕೊಡೆಯ ತುದಿಯಿಂದ, ಸುತ್ತ ಹತ್ತಡಿ ಎಲ್ಲ ಗಿಡಗಳ ತಲೆಯನ್ನೂ ಹೊಡೆದು ಬೀಳಿಸಿದೆ. ಕೋಪ ತಾಳಲಾರದೆ, ಮರದ ಮೇಲಿದ್ದ ಕಾಗೆಗಳಿಗೆಲ್ಲ ಕಲ್ಲು ಬೀರಿದೆ. ಕೈ ಮರದ ಮೇಲೆ ಕಲ್ಲಿದ್ದಲಿಂದ, 'ಪಿ. ಪಿ. ಎಸ್. ಬಸ್ ಮುರ್ದಾಬಾದ್' ಎಂದು ಬರೆದೆ. ಅದರ ಕೆಳಗೆ, ಅದರ ಪ್ರೊಪ್ರೈಟರ್ ಪಾಪಣ್ಣನ ಮೂರ್ತಿ ಬರೆದು, ಉದ್ದುದ್ದದ ಮೀಸೆ ತಿದ್ದಿದೆ ತುದಿ ಎರಡಕ್ಕೂ ಒಂದೊಂದು ಈರುಳ್ಳಿ ಗಡ್ಡೆ ತೂಗಿದೆ

ಆಗ, ಮತ್ತೊಬ್ಬರು ಗೌಡರು ಅಲ್ಲಿಗೆ ಬಂದರು—ನನ್ನ ಕಡೆ ಬರುವವರಲ್ಲ, ಅತ್ತ ಕಡೆ ಹೋಗುವವರು. ಅವರ ಬಸ್ಸು ಹೋಗಿ, ಆಗಲೇ ಅರ್ಧ ಗಂಟೆಯಾಗಿತ್ತು ದಿನವೂ ಮಧ್ಯಾಹ್ನದ ಮೇಲೆ, ಪ್ರಯಾಣಿಕರು ದಿಣ್ಣೆ ಮೇಲೆ ತಳ್ಳಿಕೊಂಡು ತರುತ್ತಾ ಇದ್ದ ಆ ಬಸ್ಸಿಗೆ, ಆ ದಿನ ಯಾವುದೋ ರೋಗ ಬಂದು ತಳ್ಳದೆಯೇ ದಿಣ್ಣೆ ಹತ್ತಿಬಿಟ್ಟಿತ್ತು. ರಾಕೂ ಠಾಕ್ ಹೇಳಿದ ಟೈಮಿಗೆ ಸರಿಯಾಗಿ ಅದು ಆ ದಿನ ಬಂದೇಬಿಟ್ಟಿತ್ತು: ಹೊರಟೇಬಿಟ್ಟಿತ್ತು.

ಸರಿ, ನಾವಿಬ್ಬರೂ ಸೇರಿ, ಬಸ್ ಕುಲವನ್ನೇ ಬೈದು ರೇಗಿದೆವು. ನನ್ನ ಕೊಡೆಯನ್ನು ಸಾಲ ಪಡೆದು, ಅವರೂನೂ ನೂರಿನ್ನೂರು ತುಂಬೆ ಗಿಡಗಳ ತಲೆ ಕಡಿದು ಬೀಳಿಸಿದರು. ಆಗ ಅವರ ಕೋಪ ಕೊಂಚ ಶಮನವಾಯಿತು. ನನ್ನಷ್ಟು ಶಬ್ದ ಸಂಪತ್ತಿ ಅವರಿಗಿರಲಿಲ್ಲ. ಅವರದೆಲ್ಲ ಅನ್ಯಾಯ, ಅಸಹ್ಯ,


ಅಸಡ್ಡಾಳ, ಅಯೋಗ್ಯ, ಹೀಗೆ ಅಕಾರಾದ್ಯ ಪದಗಳು. ಇಂಥವರ ಮಗ ಎಂದು ಹೇಳಲು ಅವರಿಗೆ ಬರದು. ನಾನು ಅಂಥ ಕೆಲ ಮಾತುಗಳನ್ನು ಅವರಿಗೆ ಹೇಳಿಕೊಟ್ಟೆ.

ಆದರೆ, ಎಷ್ಟು ಹೊತ್ತು ಶಾಪ ಬಾಣಗಳಲ್ಲಿ ಮಗ್ನರಾಗಿರುವುದು? ನಾನು ಹೋಗಬೇಕಾಗಿದ್ದದ್ದು. ಎಂಟು ಮೈಲಿ ಪೂರ್ವಕ್ಕೆ, ಒಂದು ಹೆಣ್ಣು ನೋಡುವುದಕ್ಕೆ, ನನ್ನ ಮಗನಿಗಾಗಿ. ಅವರ ಕೆಲಸವೇನೋ ತಿಳಿಯದು. ಅಂತೂ, ಪಿ. ಪಿ. ಎಸ್. ಬಸ್ಸು ನನ್ನ ಕೆಲಸಕ್ಕೆ ಅಪಶಕುನ ನುಡಿದೇಬಿಟ್ಟಿತ್ತು. ಅವರನ್ನು ಕೇಳಿದೆ, "ಗೌಡರೇ! ನೀವೆಲ್ಲಿಗೆ ಹೊರಟಿದ್ದಿರಿ?" ಎಂದೆ. "ನಾನು ಹೊರಟಿದ್ದು ಚಿಕ್ಕೆರೆ ಗ್ರಾಮಕ್ಕೆ, ದೊಡ್ಡಪುಟ್ಟೇಗೌಡರ ಮಗನ ಮದುವೆ ನಿಶ್ಚಯ ಮಾಡೋ ಮಾತುಕತೆಗೆ ನನ್ನನ್ನೂ ಬರಹೇಳಿದ್ದರು....ಹೋಗಲಿ ಬಿಡಿ! ನಾನು ಹೋದರೇನು, ಬಿಟ್ಟರೇನು? ಹೆಣ್ಣಿನ ತಂದೆ ಗಂಡಿನ ತಂದೆ, ವಧು ವರ ಎಲ್ಲ ಒಪ್ಪಿ ಆಗಿದೆ, ನನ್ನದೇನು ವೀಳ್ಯೆದೆಲೆ ಅಡಿಕೆ ತರುವುದು, ಅಷ್ಟೆ ಮದುವೆ ನಿಂತು ಹೋಗೋಲ್ಲವಲ್ಲಾ... ಆದರೂ ಈ ಅದಲಿ ಬದಲಿ ಅಲಾಲ್‌ಟೋಪಿ ಬಸ್ಸು... "

ಆಗ ನಾನು ಅವರನ್ನು ತಡೆದು, "ಯಾವ ದೊಡ್ಡ ಪುಟ್ಟೇಗೌಡ?" ಎಂದೆ. ನಾನು ಹೋಗಿ ನೋಡಬೇಕಾಗಿದ್ದ ದೊಡ್ಡ ಪುಟ್ಟೀ ಘೋಡಾನೇ ಆತ, ಎಂದು ತಿಳಿದಾಗ, ಅದುವರೆಗೂ ಪಿ. ಪಿ. ಎಸ್. ಬಸ್ಸಿನ ಮೇಲೆ ಪ್ರಯೋಗಿಸಿ, ಅಭ್ಯಾಸವಾಗಿದ್ದ, ಬೈಗಳನ್ನೆಲ್ಲ ನಾನು ಆತನ ಮೇಲೆ ಎಸೆದದ್ದರಲ್ಲಿ ತಪ್ಪೇನು ಸ್ವಾಮಿ, ನೀವೇ ಹೇಳಿ!

—ಗಂಗಾಧರ.

— o —



# ಸೋಲುವ ಸ್ಪರ್ಧೆ

ಆಸೇತು ಹಿಮಾಚಲ, ಸ್ತ್ರೀ ಪುರುಷರಾದಿಯಾಗಿ, ವಯಸ್ಕರೆಲ್ಲರೂ ಮಾರ್ಚಿ ಏಪ್ರಿಲ್ ಹೊತ್ತಿಗೆ.. ... .ಇತ್ಯಾದಿ ಹೇಳಬಹುದಾದ, ಮುಂದಿನ ಮಹಾ ಚುನಾವಣೆ, ನಿಜವಾಗಿಯೂ ಒಂದು ಮಹೋತ್ಸವ! ಅಂದು ನಮ್ಮ ದೇಶದಲ್ಲಾಗುವ ಆಂದೋಲನಗಳೇನು! ಕ್ರಾಂತಿಗಳೇನು! ಭವಿಷ್ಯವನ್ನು ಬಲ್ಲವರು ಯಾರೂ ಇಲ್ಲ. ಅದರೂ.......

ನನಗನ್ನಿಸುತ್ತದೆ: ಈ ಬಾರಿ, ಭಾರೀ ರಾಜಕೀಯ ಪಕ್ಷಗಳು ಎರಡು, ಮಹಾಜನಗಳ ಮುಂದೆ ನಿಂತು, ತಮ್ಮ ಪ್ರಚಾರ ಪರಿಪಾಠಿಯಿಂದ ಅವರ ಮನವನ್ನು ಸೂರೆ ಮಾಡಲು ಪ್ರಯತ್ನಿಸುತ್ತಾರೆ, ಎಂದು.

ಆದರೆ, ಈ ಬಾರಿ, ಜನರ ಮನವನ್ನೊಲಿಸಲು ಬಯಸುವ ಉದ್ದೇಶ ಬೇರೆ! ಏಕೆಂದರೆ, ನಮಗೆಲ್ಲರಿಗೂ ತಿಳಿದಿರುವ ಹಾಗೆ, ಯಾರಿಗೂ ಅಧಿಕಾರ ಲಾಲಸೆ ಇಲ್ಲ; ವರಮಾನ ತೆರಿಗೆ ಹೆಚ್ಚು; ಇತರೇ ವೃತ್ತಿಗಳಿಂದ ಆದಾಯ ಹೆಚ್ಚು; ವಾಕ್ ಸ್ವಾತಂತ್ರ್ಯ, ಪತ್ರಿಕಾ ಸ್ವಾತಂತ್ರ್ಯ, ಇವುಗಳಿಂದಾಗಿ ಟೀಕೆಯ ಸುರಿಮಳೆ ಬೇರೆ; ವೃಥಾ ಕಂಠಶೋಷಣ; ಆಕಾಶದಲ್ಲಿ ಹಾರಾಟ; ಅವರಿವರ ಕೈಯಲ್ಲಿ ಬೈಗುಳ; ಮಾತು ಕೊಟ್ಟೆಯಲ್ಲಾ, ಮಾವಿನಕಾಯಿ ಬೀಳಿಸು, ಎಂಬ. ರೇಗಾಟ; ಇದೆಲ್ಲಿಯ ಪೀಡೆ! ಇಂಥ ಪರಿಸ್ಥಿತಿಯಲ್ಲಿ ಎರಡು ಪಕ್ಷಗಳ ನಾಯಕರ ಉದ್ದೇಶವೇನು ಅಂದರೆ: ತಾವು ಸೋಲಬೇಕು; ಎದುರು ಪಕ್ಷದವನು ಗೆಲ್ಲಬೇಕು; ಅವನನ್ನ ಆ ಮುಳ್ಳಿನ ಹಾಸಿಗೆಯ ಮೇಲೆ ಮಲಗಿಸಿ, ತಾನು ಸುತ್ತಿಗೆ ಹಿಡಿದು, ಸತಾಯಿಸಿ........ಟೀಕಿಸಿ........'ನೀರ್‌ಕೆಳಿ ಬಡಿದು' .......ಹೀಗೆ. ಆದರೆ, ಇದು ಒಳ ಮರ್ಮ! ಹೊರಕ್ಕೆ ಹೇಳುವ ಹಾಗಿಲ್ಲ, ಇಬ್ಬರೂ!

ಆದ್ದರಿಂದಲೇ, ಮುಂದಿನ ಚುನಾವಣೆ ಕಾಲದಲ್ಲಿ, ಎರಡು ಪಕ್ಷದವರೂ ಸೋಲಲು ಪ್ರಯತ್ನಪಡುತ್ತಾರೆ; ಇದೇ ಸೋಜಿಗ, ನೋಡುತ್ತಿರಿ. ತಮ್ಮ ಕಡೆ ಓಟುಗಳು ಬೀಳದಂತೆ ಇರಲು ಈಗಿನಿಂದಲೇ ಅವರು ಕೆಲಸಗಳನ್ನು ಅಣಿ ಮಾಡುತ್ತಿರುವುದನ್ನು ನೀವು ಕಾಣುವುದಿಲ್ಲವೆ? ಚುನಾವಣೆ ಪ್ರಚಾರೋಪನ್ಯಾಸಗಳಲ್ಲಿ ಒಂದು ಪಕ್ಷದವರು, "ನಾವು ಹರಿಶ್ಚಂದ್ರರು; ನಾವು ಸತ್ಯದ ಮಾರ್ಗವನ್ನೇ ದಯಾದಾಕ್ಷಿಣ್ಯ, ಮುಖ ಮೂತಿ ಯಾವುದನ್ನೂ ಲೆಕ್ಕಿಸದೆ, ಸತ್ಯವನ್ನು

ಎತ್ತಿ ಹಿಡಿಯುತ್ತೇವೆ" ಎನ್ನುತ್ತಾರೆ ವೋಟು ಸಿಗದಿರುವುದಕ್ಕೆ ಇದೊಂದು ಉಪಾಯ. ಇದನ್ನು ಕೇಳಿ, ವ್ಯಾಪಾರಸ್ಥರೂ, ಲಾಯರುಗಳೂ, ಗಾಂಧಿ ನಿಧಿಗೆ ಹಣ ಕೂಡಿಸಿದವರೂ, ಗಾಬರಿಗೊಂಡು, ತಮ್ಮ ವೋಟು ಎತ್ತಕಡೆಗೆ ಎಂದು ನಿರ್ಧರಿಸುತ್ತಾರೆ. ಆ ಮೇಲೆ, ಒಂದು ವಾರ ಬಿಟ್ಟುಕೊಂಡು, ಅಹಿಂಸೆಯೇ ನಮ್ಮ ಅಚಲ ಪಥ! ಅಣುಮಾತ್ರ ಕೂಡ ನಾವು ಹಿಂಸೆಯನ್ನು ಸಹಿಸಲಾರೆವು. ಯಾವುದೇ ರೀತಿಯ ಹಿಂಸಕರನ್ನೂ ನಾವು ಖಂಡ ತುಂಡ ಮಾಡಿ ಬಡಿದು ಹಾಕುತ್ತೇವೆ" ಎಂದು ಗರ್ಜಿಸುತ್ತಾರೆ. ಆಗ ಮಾಂಸಾಹಾರಿಗಳೂ ಮನಿಲೆಂಡರುಗಳೂ, ಸಂಗೀತಕಾರರೂ, ಭಾಷಣಕಾರರೂ, ಗಾಡಿ ಹೊಡೆಯುವವರೂ, ಹೆದರಿ ಹಿಂಜರಿಯುತ್ತಾರೆ. ನಾಯಕರಿಗೆ ಬೇಕಾಗಿರುವುದೂ, ಅದೇ!

ಇನ್ನೊಂದು ಪಕ್ಷದ ನಾಯಕರಿಗೂ ಅಧಿಕಾರದ ಅಮಲಿಲ್ಲವಂತಲ್ಲಾ! ಈ ನಿತ್ಯಗಂಡಾಂತರ, ಈ ಮುಖ ಪ್ರಕ್ಷಾಳನೆ, ಅವರಿಗೇಕೆ? ಇತರರ ತಲೆ ಮೇಲಿ ಚಪ್ಪಡಿ ಎಳೆದು, ತಮಾಷೆ ನೋಡೋದು ಬಿಟ್ಟು, ತಮ್ಮ ತಲೆ ಮೇಲಕ್ಕೆ ಯಾರು ಅದನ್ನು ಎಳೆದುಕೊಳ್ಳುತ್ತಾರೆ, ಹೇಳಿ! ಎಲ್ಲಿ ಗೆದ್ದುಬಿಡುತ್ತೇವೋ ಎಂಬ ಭಯದಿಂದ, ಅವರೂ ತಮ್ಮ ಪ್ರಚಾರದಿಂದ ತಮಗೆ ಓಟು ಬರದೆ ಇರಲು ಪ್ರಯತ್ನಿಸುತ್ತಾರೆ. "ನಮಗೆ ನೀವು ಓಟು ಕೊಟ್ಟರೆ, ರೈತರನ್ನೆಲ್ಲ ಸರ್ಕಾರಿ ನೌಕರನ್ನಾಗಿ ಮಾಡುತ್ತೇವೆ" ಎಂದು ಅವರು ಹೆದರಿಸುತ್ತಾರೆ. ಹಳ್ಳಿಕಡೆ ಇರುವ ಮೇಸ್ಟರು, ಸ್ಕೂಲ್ ಇನ್ಸ್ಪೆಕ್ಟರು, ಸಿಡುಬಿನ ಇನ್ಸ್ಪೆಕ್ಟರ್, ಇವರ ಗೋಳನ್ನು ರೈತ ಕಾಣನೆ? "ಕೂಲಿಗಾರರ ಸಹೋದರರೇ! ನಾಳೆಯಿಂದ ನೀವೇ ಈ ಕಾರ್ಖಾನೆಗಳ ಮಾಲೀಕರು!" ಎಂದು ಅವರು ಮಜ್ದೂರ ಸಭೆಗಳಲ್ಲಿ ಘೋಷಿಸುತ್ತಾರೆ. ಆಗ ಅವರು, "ಇದೇನು ಬಂತಪ್ಪ!" ಎಂದು ಹಿಂಜರಿಯುತ್ತಾರೆ. "ನಾಳೆಯಿಂದ ನಿಮಗೆಲ್ಲ ಅಕ್ಷರ ಕಲಿಸುತ್ತೇವೆ" ಎಂದಾಗ, ವೃತ್ತ ಪತ್ರಿಕೆಗಳನ್ನು ಓದಬೇಕಲ್ಲಾ ಎಂಬ ಭಯ ಆವರಿಸುವುದು. "ದುಡಿ! ಅಥವಾ ಮಡಿ!" "ಏನೇ ಬರಲಿ! ಒಗ್ಗಟ್ಟಿರಲಿ!" "ಹಿಂಕಿಲಾಬ್"........ಸರಿ. ಅವರಿಗೆಲ್ಲ ತಲೆ ನೋವು........

ಹೀಗೆ, ಉಭಯತ್ರರೂ, ಅಧಿಕಾರದ ಭಾರ ತಪ್ಪಿಸಿಕೊಳ್ಳಲು ಉದ್ದಕ್ಕೂ ಶ್ರಮಪಡುತ್ತಾರೆ. ಚುನಾವಣೆ ದಿನ, ಇಬ್ಬರಿಗೂ ಪುಕ್ಕಲು! ಎಲ್ಲಿ ಎಳೆದು ಮಂತ್ರಿ ಪದವಿಗೆ ಏರಿಸಿ, ಕೂರಿಸಿ, ಟೀಕಿಸಿ, ಬೈದು, ಬೀರಿ, ಕೆಳಗಿಳಿಸಿ, ಆಟ ಆಡಿಸುತ್ತಾರೊ, ಎಂದು! ಪಾಪ! ಆ ದಿನ, ಪ್ರತಿ ಪೋಲಿಂಗ್ ಭೂತದಲ್ಲೂ ಓಟರುಗಳ ಮುಂದೆ ಕಾಣಿಸಿಕೊಳ್ಳುತ್ತಾರೆ, ಹಲ್ಲು ಕಿರಿಯುತ್ತಾರೆ, ಕೈ ಮುಗಿಯುತ್ತಾರೆ. "ನಾನು ನಿಜವಾಗಿಯೂ ಕೇವಲ ಅಲ್ಪ" ಎಂದು ಅಂಗಲಾಚು

ತ್ತಾರೆ. "ನಾನು ಮಾಡಿರುವ ಕೆಲಸ ಕೇವಲ ಅತ್ಯಲ್ಪ" ಎಂದು ತಲೆ ತಗ್ಗಿಸುತ್ತಾರೆ. "ನನ್ನಲ್ಲಿ ಯಾವ ಮಹತ್ವವೂ ಇಲ್ಲ", "ನಾನೊಬ್ಬ ಸಾಮಾನ್ಯ ಮನುಷ್ಯ", "ನಾನು ಅಸಾಧ್ಯ ಅನರ್ಹ"... ... ಎನ್ನುತ್ತಾರೆ. ತಮ್ಮ ಮಾತಿನಲ್ಲಿ ವೋಟರುಗಳಿಗೆ ನಂಬಿಕೆ ಬರಲು, ಆ ದಿನವೆಲ್ಲ ಎರಡು ಪಕ್ಷದ ನಾಯಕರೂ, ಬಹಳ ಒದ್ದಾಡುತ್ತಾರೆ, ಪಾಪ.

ಅವರೂ ನಂಬುತ್ತಾರೆ. ವೋಟಿನ ಚೀಟಿಗಳನ್ನು ಪಡೆದು, ಒಳಗೆ ಹೋಗಿ ಹೆಸರುಗಳನ್ನು ಓದುತ್ತಾರೆ. ಪಕ್ಷ ಪ್ರತಿಪಕ್ಷಗಳ ಭಾಷಣಗಳು ನೆನಪಿಗೆ ಬರುತ್ತವೆ........

ಗುರುತು ಮಾಡಲು ಮನ ಬರದು!....... ಸೋಲುವ ಸ್ಪರ್ಧೆಯಲ್ಲಿ ಯಾರು ಗೆಲ್ಲುತ್ತಾರೋ ನೋಡೋಣ.

— ಶ್ರೀಮತಿ ಕೇಸರಿ.



# ಇಂದಿನ ಗಾದೆಗಳು

ಬೆಳೆಯುವ ಪೈರು ಕಾಗದದಲ್ಲೇ ಕಾಣುತ್ತೆ.

ಅಂಬಾರೀಲಿ ಕೂತರೂ, ಅಂಬೇಡ್ಕರೇ ಶರಣು;
ಅಂಬಲಿ ಕುಡಿದರೂ, ಅಂಬೇಡ್ಕರೇ ಶರಣು.


ಬೆಣ್ಣೆ ಕರಗಿಸಿದ ತಕ್ಷಣ, ಬೆಣ್ಣೆ ಮಾರಿದವನನ್ನು ಹುಡುಕಿದ.

ಗಂಡಸಿಗೇಕೆ ಚೌರೀ ದುಃಖ?

ತಾನೊಂದೆಣಿಸಿದರೆ, ತಾ ಇನ್ನೆರಡು, ಅಂದನಂತೆ.

ಭಂಡ ಭಂಡರ ಜಗಳ ಗಂಟು ಹೊಡೆಯುವ ತನಕ.

ಕೂಳಿಕ್ಕುವವನೇ ರೈತ: ಇಕ್ಕಬೇಡ ಅನ್ನುವವನೇ ಸೈತ.



ಷಷ್ಟಿ ಪೂರ್ತಿ ಏನೋ ಆಯ್ತಪ್ಪ, ದೇವರು "ಶಾಂತಿ" ಕೊಡಬೇಕು ಈಗ.

# ಜನ್ಮ ಜಯಂತಿ

---

ರಾಜೀವ ಪುರದಲ್ಲಿ ಯಥಾಪ್ರಕಾರ ಒಂದು ಸೋಜಿಗ. ಎಲ್ಲಾ ಊರುಗಳಲ್ಲಿದ್ದಂತೆಯೇ ಅಲ್ಲಿಯೂ ಒಂದು "ನೌಜವಾನರ" ಯುವಕ ಸಂಘ. ಕನ್ನಡಮ್ಮನ ಛಿದ್ರ ಛಿದ್ರವಾದ ಸಂಕೋಲೆಗಳನ್ನು ಪೂರ್ಣಮಾಡಲು ಪಣ ತೊಟ್ಟ ಹುಮ್ಮಸ್ಸಿನ ಯುವಕರ ಸಂಘ. ಈ ತಿಂಗಳ ಅಮೋಘ ಸಭೆ, ಏರ್ಪಡಿಸಿದ್ದುದು, ತಮ್ಮ ತಾಲ್ಲೂಕು ಕಾಂಗ್ರೆಸ್ ಮುಖಂಡನ ೬೦ನೆಯ ಹುಟ್ಟಿದ ಹಬ್ಬದ ಸಲುವಾಗಿ. ಚಂದಾ ಪಟ್ಟಿ ನನ್ನ ಹತ್ತಿರ ಬಂದಾಗ ನಾನು ಸುಮಾರಾಗಿಯೇ ರೇಗಿಬಿದ್ದೆ.

"ಕಾರ್ಯದರ್ಶಿಯಂತೆ! ಕಾರ್ಯದರ್ಶಿ! ಭಾರತದ ಕಣ್ಮಣಿ ನೆಹ್ರೂ ಷಷ್ಟ್ಯಬ್ದಿ ಶಾಂತಿ ಆಚರಿಸಲಿಲ್ಲ. ಭಾರತವನ್ನು ಏಕೈಕ ಮಾಡಿದ ನವ ಪರಶುರಾಮ ವಲ್ಲಭ್ಭಾಯಿಯವರ ಹುಟ್ಟು ಹಬ್ಬ ಮಾಡಲಿಲ್ಲ. ಕಡೆಗೆ ಬೂದಿ ಮುಚ್ಚಿದ ಕೆಂಡದಂತಿರುವ ರಾಷ್ಟ್ರಪತಿಯ ಜನ್ಮದಿನವನ್ನೂ ಮಾಡಲಿಲ್ಲ. ತಾಲ್ಲೂಕು ಮುಖಂಡನಂತೆ! ೬೦ರ ವಯೋವೃದ್ಧ—ಜ್ಞಾನ ವೃದ್ಧ! ಈ ಹೇಚಿನ ಹುಟ್ಟಿದ ಹಬ್ಬವಂತೆ! ಹೇಚು ಬಲಿತು, ಮದುವೆಯಾಗಿ, ಅದಕ್ಕೊಂದು ಹೇಚು ಆದರೆ ಆಗ ಏನೋ ಅನ್ನಬಹುದು. ಈ ಸಮಾರಂಭಕ್ಕೆ ಸಾರ್ವಜನಿಕ ಸಭೆ. ಬೆಂಗಳೂರಿಂದ ಸಚಿವರ ಬಿಜಯ—ಭಾಷಣ, ಭಿನ್ನವತ್ತಳೆ, ಪೆಟ್ರೋಮಾಕ್ಸು—ಲೌಡ್‌ಸ್ಪೀಕರು—ಇನ್ನೇನೇನೋ? ಇದಕ್ಕೆ ನಾನು—ದುಡಿದು ಸಂಪಾದಿಸಿದ ಹಣ—ಕಾಳಸಂತೇಗೇ ಸಾಲುಲ್ಲ—ಅದನ್ನ ನಿಮಗೆ ಕೊಡಬೇಕೋ? ಅಂಥಾ ಮಡ್ಡಿ ಅಂತ ತಿಳಿದುಕೊಂಡರೋ ನನ್ನನ್ನ. ಪೆದ್ದಭಟ್ಟ ಅಂದರೆ, ದೊಡ್ಡಭಟ್ಟ ಅಂತ ತಿಳಿಯಿತೋ—ನಿಮ್ಮ ಕನ್ನಡದ ಪೆದ್ದಭಟ್ಟ ಅಲ್ಲ. ನಾವೆಲ್ಲಾ ಮೊದಲು ಕಾಗಿನಾಡ ಕಡೆಯವರು. ಇಲ್ಲಿಗೆ ವಲಸೆ ಬಂದಿದ್ದೇವೆ ಅಷ್ಟೆ! ಹೋಗಯ್ಯಾ! ಹೋಗಯ್ಯಾ!!"

ಕಾರ್ಯದರ್ಶಿ ದಿಟವಾಗಲೂ ಕಾರ್ಯವಾಸಿ. ನನ್ನ ಕಾಲು ಗಟ್ಟಿಯಾಗಿ ಹಿಡಿದ. ದೈನ್ಯದಿಂದ ಹೇಳಿದ.

"ಹಿರಿಯರು ತಾವು! ತಾವು ಹೇಳಿದ್ದೆಲ್ಲಾ ಆಶೀರ್ವಾದ ಅಂತಲೇ ನಾನು ತಿಳಿಯುತ್ತೇನೆ. ತಾವು ಚಂದಾ ಪಟ್ಟಿಗೆ ಸೊನ್ನೆಂಜ್ಞಿ ಹಾಕದಿದ್ದರೆ, ಈ

ಕೊಂಪೆಯಲ್ಲಿ ಇನ್ಯಾರು ಹಾಕುತ್ತಾರೆ? ಎಲ್ಲಿಗೆ ಹೋದರೂ ಮಾಮೂಲ್‌ದಾರರ ಬೆಂಬಲ ಇದೆಯೇ—ಅವರ ಹೆಸರೆಲ್ಲಿ ಎಂದೇ ಕೇಳುತ್ತಾರೆ. ನೀವು ನಮ್ಮ ಕೈಬಿಡಬಾರದು. ಯುವಕರ ಉತ್ಸಾಹ ಭಂಗಮಾಡಬೇಡಿ—ಆಗಲೇ ಒಂದು ನಾಟಕಕ್ಕೆ ಏರ್ಪಾಡು ಮಾಡಿಕೊಂಡಿದ್ದೇವೆ. ಹಾರ್ಮೋನಿಯಂ ಅಭ್ಯಾಸ ಮಾಡಿದ್ದೇವೆ. ನಾನೂ ಒಂದಿಷ್ಟು "ಜಾದೂ" ತೋರಿಸಲು ಅಭ್ಯಾಸ ಮಾಡಿದ್ದೇನೆ. ಎಲ್ಲವೂ ನೀರಿನಲ್ಲಿ ಹೋಮ ಮಾಡಿದಂತಾಗುತ್ತದೆ. ಎಳೆ ಮಕ್ಕಳ ಕತ್ತು ಹಿಂಡಿದಂತಾಗುತ್ತದೆ. ತಾವು ಹೆಸರಿನಂತೆ ಹಿರಿ ಮನಸ್ಸುಮಾಡಿ, ಇಲ್ಲಿ, ಈ ಮೊದಲ ಪಂಕ್ತಿಯಲ್ಲಿ ತಮ್ಮ ಅಮೃತ ಹಸ್ತದಿಂದ ಸಹಿ ಹಾಕಲೇಬೇಕು" ಎಂದ. ಬೆಣ್ಣೆಯಂತಹ ಮಾತುಗಳು, ಜೇನಿನಂತಹ ಧ್ವನಿ. ಯಾರು ತಾನೇ ಇಲ್ಲಿನ ತನಕ ಮಾಮೂಲ್ದಾರರ ಹಸ್ತಗಳನ್ನು "ಅಮೃತ ಹಸ್ತ" ಎಂದಿದ್ದು? ನನಗೂ ಮನಸ್ಸು ಪ್ರಫುಲ್ಲವಾಯಿತು. ತುಟಿಗಳು ಕಿವಿಯಿಂದ ಕಿವಿತನಕ ತಾವೇ ತಾವಾಗಿ ಬಿರಿದುವು. ಆದರೂ ಆಗ ತಾನೇ ಹೇಳಿದ್ದು ಹೇಗೆ ಮರೆಯೋದು?

ಸ್ವಲ್ಪ ಥಳುಕು ಮಾಡಿ, ಅಡ್ಡದಾರಿಗೆಳೆದೆ ಸಂಭಾಷಣೆಯನ್ನ.

"ಅಲ್ಲಾ ಕಣಯ್ಯಾ! ನಿನ್ನ ಹುಟ್ಟಿದ ಹಬ್ಬ ಆದರೆ, ಖಂಡಿತವಾಗಿ ನಾನು ಮೊದಲಿಗನಾಗುತ್ತಿದ್ದೆ. ನಯವಿನಯ ಎಲ್ಲಾ ಇದೆ. ಹಿರಿಯರು ಕಿರಿಯರು ಎನ್ನುವ ಗೌರವ ಇದೆ. ಹುಡುಗ ಮುಂದಕ್ಕೆ ಬರಲಿ ಎಂಬ ಆಕಾಂಕ್ಷೆ ಇದೆ. ನಿನ್ನ ಹುಟ್ಟಿದ ಹಬ್ಬಕ್ಕೆ ಖಂಡಿತ ನಾನು ಬಂದು ಕೈಕೈ ಕೊಟ್ಟು ಆಶೀರ್ವಾದ ಮಾಡ್ತೇನೆ. ಯಾರದೋ ಹುಟ್ಟಿದ ಹಬ್ಬಕ್ಕೆ ನನ್ನನ್ನ ಎಳೀ ಬೇಡ" ಎಂದೆ.

ಅದೇ ನಯ, ಅದೇ ನಮ್ರತೆ. ಅದೇ ಬೆಣ್ಣೆ, ಅದೇ ಜೇನು.

"ರಾಯರೇ! ಆ ದಿನ ನನ್ನದೇ ಹುಟ್ಟಿದ ಹಬ್ಬ ನಮ್ಮ ಸಂಘದವರೆಲ್ಲಾ ಅದನ್ನೇ ಆಚರಿಸೋಣ ಎಂದಂದರು. ಬಹುಮಾನಕ್ಕೆ ಅಂತ ಒಂದು ಜತೆ ಪಂಚೆ ಆಗಲೇ ಕೊಂಡಿದ್ದರು. ವಿಷಯ ನನ್ನ ಕಿವಿಗೆ ಬಂದಾಗ, ಜರೂರು ಸಭೆ ನಾನೇ ನಡಿಸಿ ಹೇಳಿದೆ. ನಮ್ಮ ಸಂಘ—ನನ್ನ ಸಂಘ—ನನ್ನ ಹುಟ್ಟಿದ ಹಬ್ಬ ಮಾಡೋದೇನು ಜಾಣತನ. ಏನು ಚೆನ್ನ. ಅದೇ ದಿನ ಇನ್ನು ಯಾರಾದರೂ ಹುಟ್ಟಿದಬ್ಬ ಆಗುವುದಿದ್ದರೆ ಅವರ ಹೆಸರಿನಲ್ಲಿ ಸಾರ್ವಜನಿಕವಾಗಿ ಸಭೆ ಮಾಡೋಣ. ನಮ್ಮ ಅಧ್ಯಕ್ಷರು ಯಾವಾಗಲಾದರೂ ನನ್ನ ಹುಟ್ಟಿದ ಹಬ್ಬವೂ ಅದೇ ದಿನ ಅಂತ ತೇಲಿಸಿ ಹೇಳಿಬಿಡಲಿ. ಎರಡೊಂದು ಕೆಲಸವೂ ಆಯಿತು. ವಿನಯಕ್ಕೆ ವಿನಯವು ಉಳಿಯಿತು. ನನ್ನ ಶ್ರೇಯೋಭಿವೃದ್ಧಿ ಮಾಡಿದ ಹಾಗೂ ಆಯಿತು" ಅಂತ ಹೇಳಿದ.

ನನಗೆ ದಿಟಕ್ಕೂ ಸಂತೋಷವಾಯಿತು. ಕನ್ನಡ ಸೀಮೆಗೆ ವಲಸೆ ಬಂದು ಇನ್ನೂರರ ಮೇಲೆ ವರ್ಷಗಳಾಗಿದ್ದುವು. ಆದರೆ ಈ ಪಿಲ್ಟು ಇವತ್ತು ನನ್ನ ಹೆಸರು ತೆಲುಗಿನದಲ್ಲ ಕನ್ನಡದ್ದೇ! ಅಂತ ತೋರಿಸಿಕೊಟ್ಟಿದ್ದ. ಆದರೂ ನನ್ನ ಮನಸ್ಸು ಉರಿಯಲಿಲ್ಲ ಸಂತೋಷವೇ ಆಯಿತು.

ಕೂಡಲೇ ಆ ಚಂದಾ ಪಟ್ಟಿಯಲ್ಲಿ ನನ್ನ ಹೆಸರು ಸಹಿ ಮಾಡಿದೆ. ಆ ದಿನದ ಸಂಪಾದನೆಯಾದ ಇಪ್ಪತ್ತೈದು ರೂಪಾಯಿ ಚಂದಾ ಬರೆದೆ. ಒಳಕ್ಕೆ ಹೋಗಿ ನನಗೆ ಮದುವೇಲಿ ಕೊಟ್ಟಿದ್ದ ಶಾಲು ತೆಗೆದುಕೊಂಡು ಬಂದೆ.

"ಕಾರ್ಯದರ್ಶಿ! ಚಿರಂಜೀವಿಯಾಗಿರು! ಇಂತಹ ಹುಟ್ಟಿದ ಹಬ್ಬಗಳು ನೂರಾರು ಬರಲಿ. ಈ ಶಾಲನ್ನು ನಾನು ಆಶೀರ್ವಾದ ರೂಪವಾಗಿ ಹೊದ್ದಿಸುತ್ತೇನೆ. ನೀನೂ ಚೆನ್ನಾಗಿ ಓದಿ ಸರದಾರನಾಗಿ ಬಾಳು" ಎಂದು ಆಶೀರ್ವಾದ ಮಾಡಿದೆ.

—ಪೆದ್ದಭಟ್ಟ.

———o———



ಹಿಂದೀ ಮಾಸ್ತರು— ಸರ್ಕಾರದವರು ಹಿಂದೀಯನ್ನು ಕಡ್ಡಾಯವಾಗಿ ಕಲಿಸ್ತಾರಂತ್ರೀ.
ಸ್ನೇಹಿತ—ಅಂದಮೇಲೆ ಇನ್ನು ಮೇಲೆ ಸಾಲ ಹುಟ್ಟುಬೋದು ಅಂತೀನಿ.

# ನಮ್ಮ ಕರೆ


ನಾವು ಬರುವಂತಿಲ್ಲ, ಕರೆದು ಫಲವೇನು ?
ತೆರೆದ ಬಾಗಿಲ ದಾಟಿ ಬೇಗ ಬನ್ನಿ !

ವಿರಹ ಬೇಗೆಗೆ ಬೆಂದು ಬ್ಳಾಡುತಿದೆ, ನಾಡು!
ಭರವಸೆಯು ಕೊಡಿರೆಮಗೆ, ಮರೆತು ಸೇಡು.
ಇಕ್ಕೆಲದ ಸೆಳೆತಕ್ಕೆ ಸೀಳಾಗಿ ಪಾಡು,
ವಿಂಗಡಿಸಿ ಏಯ್ದಾಗಿ ಹೋಗಿಹುದು, ನೋಡು !

ಈ ನಮ್ಮ ರಾಜ್ಯಕ್ಕೆ ಓಡಿ ಬನ್ನಿ, ನಿಮ್ಮವರ ಕೂಡಿ ಬನ್ನಿ
ಜಿವಿಸಿ ವರದಿಯನು ದಾಟಿ ಬನ್ನಿ, ಎಮ್ಮೊಡನೆ ಕೂಡಬನ್ನಿ !

—ಕಾಮತ್.

—o—



– ಏನಾಗುತ್ತೇರಿ ನಿಮಗೆ !

—ಪ್ಜ —

# ಸ್ವಲ್ಪ ಹುಷಾರಾಗಿರಬೇಕು

ಎಂದೂ ಸೆಕೆಂಡ್ ಕ್ಲಾಸಿನಲ್ಲಿ ಕುಳಿತಿದ್ದೇ ಇಲ್ಲ. ಆದರೆ ಅಂದು ಭಾಷಣ ಮುಗಿಸಿಕೊಂಡು ಶ್ರೀರಂಗಪಟ್ಟಣದಲ್ಲಿ ರೈಲು ಹತ್ತಿದಾಗ ಕಾರ್ಯದರ್ಶಿ ಬಂದು ಸೆಕೆಂಡ್ ಕ್ಲಾಸ್ ಟಿಕೆಟ್ ಕೈಗೆ ಕೊಟ್ಟ. ಮನಸ್ಸಿನಲ್ಲಿ ಆ ಹಣ ಕೈಗೆ ಕೊಡ ಬಾರದಾಗಿತ್ತೆ ಎಂದನ್ನಿಸಿದರೂ ಒಂದು ಸಾರಿ ಈ ಸೆಕೆಂಡ್ ಕ್ಲಾಸ್ ಹೇಗಿರುತ್ತೊ ನೋಡೇಬಿಡೋಣ ಅಂತ ಕುಳಿತೆ. ಆ ಗಾಡಿಯಲ್ಲಿ ಇನ್ನೊಬ್ಬ ರಿದ್ದರು. ಬಟ್ಟೆ, ಹಣೆಬರೆ ಎಲ್ಲಾ ನೋಡಿದರೆ ಹಣವಂತರ ಹಾಗಿದ್ದರು. ಅವರೆದುರಿಗೆ ನನ್ನ ಕುಚೇಲತ್ವ ತೋರಿಸಿಕೊಳ್ಳಬಾರದು ಎಂದು ಇದ್ದುದರಲ್ಲಿ ಸ್ವಲ್ಪ ಜಬರ್ದಾಗಿಯೇ ಮಾತನಾಡೋಣ ಅಂತ ಯೋಚಿಸುತ್ತಾ ಇದ್ದೆ.

ಅಷ್ಟರಲ್ಲೇ "ಜಯಂತಿ, ಜನ್ಮಭೂಮಿ, ಆಂಧ್ರಪತ್ರಿಕೆ" ಅಂತ ಕೂಗುತ್ತಾ ಪತ್ರಿಕಾ ಮಾರುವವ ಬಂದ. "ಬೇಕೇನ್ಸಾರ್" ಅಂತ ನನ್ನ ಕಡೆ ತಿರುಗಿದ. ಯಾರು ಅವನು ಗೊತ್ತೆ? ನನ್ನ ಹಳೇ ಸ್ನೇಹಿತ. ನಾನೂ ಗುರ್ತು ಸಿಗದವ ನಂತೆಯೇ ಇದ್ದುಬಿಡೋಣ ಅಂತಿದ್ದೆ. ಆದರೆ ಅವ ಸುಮ್ಮಗಿರಬೇಕಲ್ಲಾ. "ಏನಯ್ಯಾ! ಸಾಮಿ, ಇಲ್ಲಿಗೆ ಯಾವಾಗ ಬಂದೆ? ಏನು ಬಂದಿದ್ದು? ಈ ಸೆಕೆಂಡ್ ಕ್ಲಾಸ್ ಏನು? ಎಲ್ಲಾದರೂ ಈಗ ಕೆಲಸ ಸಿಕ್ಕಿದೆಯೇ? ಮೊನ್ನೆ ಬೆಂಗಳೂರಿನಲ್ಲಿ ಕಂಡಾಗ ನಾನೇ ಕಾಫಿ ಕೊಡಿಸಬೇಕಾಯ್ತು. ಏನಯ್ಯಾ ಇದರ ಮರ್ಮ" ಎಂದೇ ಬಿಟ್ಟ.

"ಸಂಘದ ಭಾಷಣಕ್ಕೆ ಕರೆದಿದ್ದರು ಬಂದಿದ್ದೆ. ನೀನಿಲ್ಲಿದ್ದಿ ಅಂತ ಗೊತ್ತಿಲ್ಲ. ಇಲ್ಲದೆ ಇದ್ದರೆ, ನಿನ್ನ ನೋಡುತ್ತಿದ್ದೆ. ಚೆನ್ನಾಗಿದೀಯಾ" ಅಂತ ಮಾತು ತೇಲಿಸಿದೆ.

"ಚೆನ್ನಾಗಿದೀನಯ್ಯಾ! ನೀನೂ ಚೆನ್ನಾಗಿದೀಯಾ? ಮನೆಗೆ ಹೋದರೆ ಅತ್ತಿಗೇಗೆ ಹೇಳಯ್ಯಾ, ಕೇಳಿದೆ ಅಂತ. ಅಂದ ಹಾಗೇ ನೋಡು ಇದೊಂದು ಬುಟ್ಟಿ ಕೊಡ್ತೀನಿ ದಯವಿಟ್ಟು ನಮ್ಮ ಭಾವನ ಮನೆಗೆ ಸಾಗಿಸಿ ಬಿಡ್ತೀಯಾ" ಅಂದ.

"ಅಯ್ಯೋ! ನಾನು ಬೆಂಗಳೂರಿನಲ್ಲಿ ಇಳಿದು ತಕ್ಷಣವೇ ಮದ್ರಾಸಿಗೆ ಹೋಗಬೇಕಲ್ಲಯ್ಯಾ ನಾಳೆ ಅಲ್ಲಿ ಬಾನುಲಿಯಲ್ಲಿ ನನ್ನ ಭಾಷಣ. ಇಲ್ಲದೆ

ಇದ್ದರೆ ಖಂಡಿತವಾಗಿ ತೆಗೆದುಕೊಂಡು ಹೋಗುತ್ತಿದ್ದೆ. ಸಂತೋಷವಾಗಿ ಸಾಗಿಸುತ್ತಿದ್ದೆ" ಅಂದೆ.

"ಹೋಗಲಿ ಬಿಡು" ಎಂದು ಮುಂದುವರೆದ

ರೈಲೂ ಮುಂದುವರೆಯಿತು

* * *

ಎದುರಿಗಿದ್ದಾತ ಮೆಲ್ಲಗೆ ಮಾತಿಗೆ ಪ್ರಾರಂಭಿಸಿದ. "ಯಾವ ಸಂಘದಲ್ಲಿ ರಾಯರೇ ತಮ್ಮ ಭಾಷಣ—ನೋಡಿದರೇನೋ ಹಿಂದೂ ಮಹಾ ಸಭೆಯವರಂತೆ ಕಾಣಿಸುತ್ತೀರಿ ಅಂದ.

ಎಲಾ ಘಾಟಿ! ಅಂದುಕೊಂಡೆ. ನಾನು ಹಾಕಿದ್ದುದು ಗಾಂಧೀ ಟೋಪಿ. ಅದು ಸ್ವಲ್ಪ ಕೊಳೆಯಾಗಿ ಕೇಸರೀ ಬಣ್ಣಕ್ಕೆ ತಿರುಗಿತ್ತು ಅಷ್ಟೆ. ಅದಕ್ಕೇ ಅವ ಹೀಗನ್ನಬಹುದೇ? ಆದರೂ ಇವನಿಗೆ ತಿರುಮಂತ್ರ ಹೇಳಲೇ ಬೇಕು ಎಂದು ಕೊಂಡೆ.

"ಹೌದು ರಾಯರೇ! ವೀರ ಸಾವರ್ಕರ್ ನಮ್ಮೂರಿಗೆ ಬರ್ತಾರೆ. ಇಲ್ಲಿಂದ ಕೆಲವರು ಸ್ವಯಂ ಸೇವಕರು ಬರ್ತಾರೆ ಅವರಿಗೆ ಮುಂದಿನ ಕ್ರಮ ವನ್ನೆಲ್ಲಾ ವಿವರಿಸಿ ಹೋಗೋಣ ಅಂತ ಬಂದಿದ್ದೆ" ಅಂದೆ.

ಅವನ ಮೇಲೆ ಇದು ಸ್ವಲ್ಪ ಪರಿಣಾಮ ಉಂಟುಮಾಡಿತು. ಸ್ವಲ್ಪ ಮರ್ಯಾದೆ ಹೆಚ್ಚು ಕೊಟ್ಟು, ಮಾತು ಮುಂದುವರಿಸಿದ. ಆಗಲೇ ನನಗೆ ತಿಳಿಯಿತು, "ಇವನೆಲ್ಲೋ ಕಾಳಸಂತೆ ಕುಬೇರ. ಇಲ್ಲದೆ ಹೋದರೆ ರಾಜ ಕಾರಣಿ ಎಂಬ ಅನುಮಾನ ಬಂದಾಗಲೇ ಬೆಚ್ಚಿ ಬೆದರುತ್ತಾನೆ ಏಕೆ?" ಎಂದು.

"ಮದ್ರಾಸಿನಲ್ಲಿ ಏನೋ ಭಾಷಣ" ಅಂದ.

"ಬೃಹನ್ಮೈಸೂರು. ಅದರ ವಿಷಯ ಉಪನ್ಯಾಸ" ಅಂದೆ. ಅವನು ತೀರಾ ಸುಸ್ತಾದಹಾಗೆ ಕಾಣಿಸಿತು.

"ಅಯ್ಯೋ, ಪಾಪ! ಹೀಗೇ ನೀವು ಅಂತ ತಿಳಿದಿದ್ದರೆ ನಿಮ್ಮ ಸ್ನೇಹಿತರು ಕೊಡಬೇಕು ಅಂತ ಇದ್ದರಲ್ಲಾ ಆ ಬುಟ್ಟಿ,. ಅದನ್ನು ಅವರ ಮನೆಗೆ ನಾನು ಸಾಗಿಸ್ತಾ ಇದ್ದೆನಲ್ಲ—ತೋಚಲೇ ಇಲ್ಲ—ನಾನು ಬೆಂಗಳೂರಿನಲ್ಲೇ ಇಳಿದು ಅಲ್ಲೇ ಎರಡು ದಿನ ಇರ್ತೀನಿ—ಏನು ಅಚಾತುರ್ಯ ಮಾಡಿಬಿಟ್ಟೆ" ಎಂದು ಕೈಕೈ ಹಿಸುಕಿಕೊಂಡು ಪಶ್ಚಾತ್ತಾಪ ಪಡಲು ಆರಂಭಿಸಿದ.

ಅವನನ್ನು ಸಮಜಾಯಿಷಿ ಮಾಡಿ, ನೊಂದುಕೋಬೇಡ ಅನ್ನೋದೇ ಪ್ರಯಾಸವಾಯಿತು. ಹಾಗೂ ಹೇಳಿದೆ.

"ರಾಯರೇ, ನೀವು ಪಶ್ಚಾತ್ತಾಪ ಪಡಬೇಕಾಗಿಲ್ಲ. ಈಗಿನ ಕಾಲದಲ್ಲಿ ಸ್ವಲ್ಪ ಹುಷಾರಾಗಿರಬೇಕು. ರೈಲಿನಲ್ಲಿ ಹೋಗುವಾಗ ಯಾರಾದರೂ ಏನಾದರೂ ತಂದುಕೊಟ್ಟರೆ, ಯಾರಿಗಾದರೂ ತಲಪಿಸಿ ಅಂತ, ಸುಮ್ಮನೆ ಒಪ್ಪಿಕೋ ಬಾರದು. ಮೊನ್ನೆ ನಾನು ಸಿಕ್ಕಿಹಾಕಿಕೊಂಡ ಪ್ರಸಂಗ ಒಂದು ಹೇಳ್ತೀನೆ ಕೇಳಿ.

ದೆಹಲಿಯಿಂದ ಪಂಡಿತಜೀಯವರನ್ನು ನೋಡಿಕೊಂಡು ಹಿಂತಿರುಗಿ ಬರ್ತಾ ಇದ್ದೆ. ಗುಂತಕಲ್ ಹತ್ತಿರ ಮೈಸೂರಿನವನೊಬ್ಬ ಸಿಕ್ಕಿದ. ಅಲ್ಲಿ ಎರಡು ಗಂಟೆ ಕಾಯಬೇಕಲ್ಲ! ಬೆಂಗಳೂರು ರೈಲಿಗೆ. ಅವನ ಹತ್ತಿರ ನಿಲ್ದಾಣ ದಲ್ಲಿ ಮಾತುಕತೆ ಆಯಿತು. ಕಡೆಗೆ ಸ್ವಾಮಿ ಅಂದ. ನೀವು ಹೇಗಿದ್ದರೂ ಬೆಂಗಳೂರಿಗೆ ಹೋಗ್ತೀರಿ. ಈ ಹಾಸಿಗೆ ನಿಮ್ಮ ಕಂಪಾರ್ಟ್‌ಮೆಂಟಿನಲ್ಲಿಡು ತ್ತೀನೆ. ನಾನು ಮೂರನೇ ಕ್ಲಾಸು ಪ್ರಯಾಣ. ಅಲ್ಲಿ ಇಡಲು ಸ್ಥಳವಿಲ್ಲ ಅಂದ. ಬೆಂಗಳೂರಿನಲ್ಲಿ ತೆಗೆದುಕೊಂಡು ಹೋಗುತ್ತೇನೆ" ಎಂದ.

"ಇದೇನು ಮಹಾ ಉಪಕಾರ, ನನಗೇನು ಕಷ್ಟ ಅಂತ ಹಾಗೇ ಆಗಲಿ ಅಂದೆ.

ರೈಲು ಬಂದಾಗ ಆ ಹಾಸಿಗೆ ನನ್ನ ಕಂಪಾರ್ಟ್‌ಮೆಂಟಿನಲ್ಲಿಟ್ಟ. ರೈಲೂ ಹೊರಟಿತು. ಧರ್ಮಾವರಂಗೆ ಬರೋ ಹೊತ್ತಿಗೆ ಆ ಹಾಸಿಗೆ ವಿಚಾರವೇ ಮರೆತುಹೋಗಿತ್ತು. "ಭಾರತದ ಸಂಸ್ಕೃತಿ" ಎಂಬ ಪುಸ್ತಕಕ್ಕೆ ಮುನ್ನುಡಿ ಬರೆಯಬೇಕಾಗಿತ್ತು. ಅದನ್ನೇ ಯೋಚಿಸುತ್ತಿದ್ದೆ.

ಹಿಂದೂಪುರ ಬಂತು. ಕಂಪಾರ್ಟ್‌ಮೆಂಟಿನ ಒಳಕ್ಕೆ ಒಬ್ಬ ಪೋಲೀಸಿ ನವನೂ ಬಂದ. ಬಂದವನೇ ಆ ಹಾಸಿಗೆಯನ್ನು ತೋರಿಸಿ, ಯಾರದ್ರೀ ಈ ಹಾಸಿಗೆ ಅಂದ. ನಾವಿಬ್ಬರೇ ಆ ಗಾಡಿಯಲ್ಲಿದ್ದವರು. ಒಬ್ಬ ಧರ್ಮಾವರಂ ನಲ್ಲಿ ಹತ್ತಿದ ಪರಾಣ. ನಾನೊಬ್ಬ—ನಾನು ಸುಮ್ಮನೆ ಇದ್ದೆ. ಯಾಕೋ ಏನೋ, ತಿಳಿಯಲಿ, ಆ ಮೇಲೆ ನಂದು ಎನ್ನೋಣ ಅಂತ. ಆ ಪೋಲೀಸಿನವ ನಿಗೆ ತಾಳ್ಮೆ ಇಲ್ಲ. ಹಾಸಿಗೆ ಬಿಚ್ಚಿದ. ಏನಿತ್ತು ಗೊತ್ತೇ? ನಾಲ್ಕು ವೀಸೆ ಸಕ್ಕರೆ, ಇಪ್ಪತ್ತು ಸೇರು ಅಕ್ಕಿ.

ತಿರುಗಿ "ಯಾರದ್ರೀ" ಈ ಹಾಸಿಗೆ ಅಂದ.

"ಯಾರೋ ಈಗ ತಾನೇ ಕಾಫಿ ಕುಡಿಯುಕ್ಕೆ ಅಂತ ಇಳಿದರು ಅವ ರದ್ದು. ಈಗ ಬರೋರು" ಎಂದೆ.

ಅವನೂ ಕೂತ. ಯಾರೂ ಬರಲಿಲ್ಲ—ರೈಲೂ ಹೊರಟಿತು.

"ಎಲ್ರೀ ನಿಮ್ಮ ಸ್ನೇಹಿತರು, ಕಾಫಿ ಕುಡಿಯುಕ್ಕೆ ಹೋದರು ಅಂದರಲ್ಲ" ಅಂದ.

"ನನಗೆ ಅವರ ಹೆಸರೂ ಗೊತ್ತಿಲ್ಲ. ನನ್ನ ಸ್ನೇಹಿತರು ಯಾಕೆ ಆದಾರು? ಇಲ್ಲಿ ಕೂತಿದ್ದರು ಸ್ಟೇಷನ್ ಬರುತ್ತಲೂ ಇಳಿದು ಹೋದರು. ಈಗ ಯೋಚಿಸಿ ಪರೆ ನಿಮ್ಮನ್ನ ನೋಡೇ ಹಿಂತಿರುಗಿ ಬರಲಿಲ್ಲ ಅಂತ ಕಾಣುತ್ತೆ" ಅಂದೆ.

ಪೋಲೀಸಿನವ ಪೆಚ್ಚಾದ. ಮುಂದಿನ ಸ್ಟೇಷನ್ನಿನಲ್ಲಿ ಆ ಹಾಸಿಗೇನೂ ಸಾಗಿಸಿಕೊಂಡು ಇಳಿದುಹೋದ. ನನ್ನದೇನಾದರೂ ಸಾಕ್ಷ್ಯ ಬೇಕೆ ಎಂದೆ. ಏನೂ ಬೇಡ ಅಂತ ಅವನಂದಿದ್ದು ನೋಡಿದರೆ, ಆ ಸಕ್ಕರೆ ಅಕ್ಕಿ ಹಾಸಿಗೆ ಎಲ್ಲಾ ಅವನ ಮನೆಗೇ ಇರಬಹುದು ಎನ್ನಿಸಿತು.

ಏನೋ! ಏನಾದರೂ ಆಗಲಿ, ಆ ಸರ್ತಿ ಬಚಾವಾದದ್ದೇ ಹೆಚ್ಚು. ದೇವರೇನೋ ಸಮಯಕ್ಕೆ ಬುದ್ಧಿ ಕೊಟ್ಟ. ನಾಲಿಗೆ ಹರಿತವಾಗಿತ್ತು. ಬದುಕಿ ಕೊಂಡೆ.

ಅದಕ್ಕೇ ನೋಡಿ ಹೇಳೋದು. ರೈಲು ಪ್ರಯಾಣ ಮಾಡೋವಾಗ "ಸ್ವಲ್ಪ ಹುಷಾರಾಗಿರಬೇಕು" ಅಂತ.

ಸ್ನೇಹಿತರಾದರೇನು ಯಾರಾದರೇನು ಬುಟ್ಟಿ, ಹಾಸಿಗೆ, ಚೀಲ ಕೈಲಿ ಕೊಟ್ಟರೆ ಏನೋ ಒಳಮರ್ಮ ಇದೆ ಅಂತ ಜಾರಿಕೋ ಬೇಕು! ಅಂತ ಹೇಳಿ, ಅವನ ದುಃಖ ತೀರಿಸಿದೆ.

—ಸಾನಿ.

---

ಈ ಸಾರಿ ಖೆಡ್ಡಾ ನೋಡುವುದಕ್ಕೆ ಹೋಗುವವರೆಲ್ಲಾ "ಆನೆ ಕಾಲಿನ" ರೋಗಕ್ಕೆ ಇಂಜಕ್ಷನ್ ತೆಗೆದುಕೊಳ್ಳಲೇ ಬೇಕೆಂದು ಏನೂ ನಿಯಮವಿಲ್ಲವಂತೆ.

* * *

ಮೂರನೇ ಮಹಾಯುದ್ಧ ಭಾರತದಲ್ಲಿ ಎಲ್ಲಿ ನಡೆಯುತ್ತೋ ಎಂದು ಹೆದರಿದ್ದವರು ಈಗ ಧೈರ್ಯವಾಗಿರುವರಂತೆ

—ಏನು! ಡಾ|| ಮಲನ್‌ರ ಆಫ್ರಿಕಾದಲ್ಲಿ ನಡೆಯುತ್ತೆ ಎಂದು ಖಂಡಿತವೇ!

* * *

ಕ್ರೈಸ್ತನ ಹುಟ್ಟುಸ್ಥಳವಾದ ಇಸ್ರೈಲಿನಲ್ಲಿ ಈ ಸಾರಿ ಕ್ರಿಸ್‌ಮಸ್ ಹಬ್ಬ ವನ್ನು ಯೆಹೂದಿಯುವರೂ, ಅರಬ್ಬರೂ ಆಚರಿಸುವರಂತೆ; ಎಂದಿನಂತೆ.

# ಕೊರವಂಜಿ

ಬಳೇಪೇಟೆ : : ಬೆಂಗಳೂರು 2

**ಬಿಡಿ ಪ್ರತಿ ಕೇವಲ ನಾಲ್ಕಾಣೆ**

ವಾರ್ಷಿಕ ಚಂದಾ : 3 ರೂ.ಗಳು (ಅಂಚೆ ವೆಚ್ಚ ಸ


## ನಮ್ಮ ಮಾರಾಟಗಾರರು

ಶ್ರೀ ಎನ್. ವಿ. ಅನಂತಾಚಾರ್ಯ – ಚಿತ್ರ

,, ಭಾರತ್ ಬುಕ್ ಡಿಪೋ – ಧಾ

,, ಚಂದ್ರಶೇಖರಯ್ಯ – ನಂಜನಗ

,, ಚಾರಿ ಮತ್ತು ರಾಯರು – ಹೈದರಾ

,, ವಿ. ಕೆ. ಗೋಕಲೆ – ಹು

,, ಕೆ ವಿ. ಗುಪ್ತ – ಚಿಂತಾ

,, ಗುರುನಾಥನಾಯಕ್ – ಹ

,, ಗುರುರಾಜಾಚಾರ್ಯ – ರಾಬರ್ಟ್ಸನ

,, ಎಸ್. ಎಲ್. ಎನ್. ನ್ಯೂಸ್ – ವ

,, ಎಂ. ಕೃಷ್ಣರಾವ್ – ಭದ್ರಾ

,, ಎಂ. ಎನ್. ಕೇಶವಮೂರ್ತಿ – ಹ

,, ಕರ್ನಾಟಕ ಇಂಕ್ ಕಂಪನಿ – ಬಾಗಲಕೆ

,, ವಿ. ಎಂ. ಅಂದನೂರು – ದಾವ

,, ವಿ. ಲಕ್ಷ್ಮಣರಾವ್ – ವಿ.ದ

,, ಮಹಾರಾಜಪೇಟೆ – ಹಾ

,, ಮುನಿವೆಂಕಟಪ್ಪ – ಯಶವಂ

,, ಎಂ. ನಾಗಪ್ಪಶೆಟ್ಟಿ ಮತ್ತು ಮಕ್ಕಳು – ಶಿವಪ

,, ಎಚ್. ಎಂ. ನರಸಿಂಹಯ್ಯ ಶೆಟ್ಟಿ ಮತ್ತು ಮಕ್ಕ – ಕಡ

,, ಸಿ. ಆರ್. ಕೃಷ್ಣಮೂರ್ತಿ – ಚೆನ್ನಪ

,, ನಾರಾಯಣ ಶೆಟ್ಟಿ – ಮಂಗಳ

,, ಶ್ರೀಧರ್ ಅಂಡ್ ಬ್ರದರ್ಸ್ – ಹೊಸದ

,, ಟಿ. ಕೆ. ಎನ್. ಮೂರ್ತಿ – ತ

,, ಕೆ. ವೆಂಕಟರಾವ್ – ಹೊಸ

,, ರೇಡಿಯೆಂಟ್ ನ್ಯೂಸ್ ಏಜನ್ಸಿ – ಮೈಸ

,, ಕೆ. ರಂಗಪ್ಪ – ಹೊಸ

,, ವಾಲ್ಮೀಕಿ ರಂಗಾಚಾರ್ಯ – ಕೃಷ್ಣರಾಜ

,, ಷಹ ಶ್ಯಾಮಜಿ ಜೀತಾಭಾಯ್ –

(ಮುಂದುವರಿಯುವ




**a TALLAM RELEASE**

Printed by B S Iyengar, Bangalore City
Publisher—B N Gupta Editor—M Shivaram